

# ಸರಕಾರಿ ಹಿರಿಯ ಪ್ರಾಥಮಿಕ ಶಾಲೆ


ತಾ॥ ಮುಧೋಳ **ಒಂಟಗೋಡಿ** ಜಿ॥ ಬಾಗಲಕೋಟೆ

# ಪಾಠ ಯೋಜನೆ 2023–24






**6 ನೇ ತರಗತಿ**
**ವಿಜ್ಞಾನ**







ಶ್ರೀ. ಗಣಪತಿ ಕೋಲಾರ
(ಜಿ.ಪಿ.ಟಿ)
(ಗಣಿತ ಮತ್ತು ವಿಜ್ಞಾನ)



| ವಿಷಯ : ವಿಜ್ಞಾನ | ಪಾಠ ಯೋಜನೆ | ತರಗತಿ : 6 ನೇ ತರಗತಿ |
|---|---|---|
| ಘಟಕದ ಹೆಸರು : ಆಹಾರ – ಇದು ಎಲ್ಲಿಂದ ದೊರಕುತ್ತದೆ? | ದಿನಾಂಕ : ರಿಂದ ವರೆಗೆ | |

| ಸಾಮರ್ಥ್ಯಗಳು : | |
|---|---|
| | 1) ಭಾರತದ ಬೇರೆ ಬೇರೆ ಪ್ರದೇಶಗಳಲ್ಲಿ ಆಹಾರ ಪದ್ಧತಿಯಲ್ಲಿ ಬಹಳ ವೈವಿಧ್ಯತೆ ಇದೆ ಎಂದು ತಿಳಿಯುವುದು. |
| | 2) ಪ್ರಾಣಿಗಳು ಮತ್ತು ಸಸ್ಯಗಳು ನಮ್ಮ ಆಹಾರದ ಪ್ರಮುಖ ಮೂಲಗಳೆಂದು ಅರಿಯುವುದು. |
| | 3) ಸಸ್ಯಾಹಾರಿ ಮತ್ತು ಮಾಂಸಾಹಾರಿಗಳ ಕುರಿತು ತಿಳಿಯುವರು ಮತ್ತು ಗುರುತಿಸುವರು. |
| | 4) ಮಿಶ್ರಾಹಾರಿಗಳನ್ನು ವ್ಯಾಖ್ಯಾನಿಸುವುದು ಮತ್ತು ಉದಾಹರಿಸುವರು. |
| | |

| ಕಲಿಕೆಯ ಅಂಶಗಳು | ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು | ಬೋಧನಾ–ಕಲಿಕೋಪಕರಣಗಳು | ಮೌಲ್ಯಮಾಪನ ಸಾಧನ–ತಂತ್ರಗಳು | ಶಿಕ್ಷಕರ ಸ್ವ–ಅವಲೋಕನ |
|---|---|---|---|---|
| **ತೊಡಗಿಸಿಕೊಳ್ಳುವಿಕೆ** | * ಮಕ್ಕಳನ್ನು ಗುಂಪುಗಳಾಗಿ ಮಾಡಿ ಗುಂಪುಗಳಿಗೆ ನಾವು ವಿವಿಧ ಆಹಾರ ಪದಾರ್ಥಗಳ ಬಗ್ಗೆ ಚರ್ಚಿಸಿ ಪಟ್ಟಿ ಮಾಡಲು ಹೇಳುವುದು. | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ : ಪಟ್ಟಿ ಮಾಡುವುದು | * ವಿವಿಧ ಆಹಾರ ಪದಾರ್ಥಗಳನ್ನು ಗುರುತಿಸುವರೇ? |
| **ಪತ್ತೆಹಚ್ಚುವಿಕೆ** | * ಮಕ್ಕಳಿಗೆ ಯಾವ ಮೂಲಗಳಿಂದ ಆಹಾರ ದೊರಕುತ್ತದೆ? ಎಂಬುದನ್ನು ಗುಂಪಿನಲ್ಲಿ ಚರ್ಚಿಸಿ ಮಾಹಿತಿ ಸಂಗ್ರಹಿಸಲು ತಿಳಿಸುವುದು. | ಚಟುವಟಿಕೆ | ತಂತ್ರ : ಅವಲೋಕನ<br>ಸಾಧನ : ಮಾಹಿತಿ ಸಂಗ್ರಹಣೆ | * ಆಹಾರದ ಮೂಲಗಳನ್ನು ಗುರುತಿಸುವರೇ? |
| **ವಿವರಣೆ**<br><br>* ಆಹಾರದ ವೈವಿಧ್ಯ ಮತ್ತು ಆಹಾರ ವಸ್ತುಗಳು ಹಾಗೂ ಮೂಲಗಳು : | * ಭಾರತದಲ್ಲಿ ಭೌಗೋಳಿಕವಾರು ಜನರು ವಿವಿಧ ಆಹಾರ ಪದಾರ್ಥಗಳನ್ನು ಸೇವಿಸುವರು ಎಂಬುದನ್ನು ತಿಳಿಸುತ್ತಾ, ವಿವಿಧ ಆಹಾರ ಪದಾರ್ಥಗಳು ಮತ್ತು ಅವುಗಳ ಘಟಕಾಂಶಗಳ ಕುರಿತು ಚರ್ಚಿಸುವುದು<br>ಉದಾ : ಚಪಾತಿ – ಹಿಟ್ಟು, ನೀರು<br><br>ನಾವು ಸೇವಿಸುವ ಆಹಾರ ಪದಾರ್ಥಗಳು ಪ್ರಮುಖವಾಗಿ ಸಸ್ಯ ಮತ್ತು ಪ್ರಾಣಿ ಮೂಲಗಳಿಂದ ಸಿಗುತ್ತದೆ ಎಂದು ಉದಾಹರಣೆಗಳ ಮೂಲಕ ವಿವರಿಸುವುದು. | ಆಹಾರ ಪದಾರ್ಥಗಳ ಚಾರ್ಟ್ | ತಂತ್ರ : ವಿವರಣೆ<br>ಸಾಧನ : ಉದಾಹರಣೆಗಳು | * ಆಹಾರ ವೈವಿಧ್ಯ ಮತ್ತು ಆಹಾರ ವಸ್ತುಗಳ ಮೂಲಗಳನ್ನು ಗುರುತಿಸುವರೇ? |

| ವಿಷಯ : ವಿಜ್ಞಾನ | ತರಗತಿ : 6 ನೇ ತರಗತಿ | | | |
|---|---|---|---|---|
| **ಕಲಿಕೆಯ ಅಂಶಗಳು** | **ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು** | **ಬೋಧನಾ–ಕಲಿಕೋಪಕರಣಗಳು** | **ಮೌಲ್ಯಮಾಪನ ಸಾಧನ–ತಂತ್ರಗಳು** | **ಶಿಕ್ಷಕರ ಸ್ವ–ಅವಲೋಕನ** |
| * ಆಹಾರವಾಗಿ ಸಸ್ಯದ ಭಾಗಗಳು ಮತ್ತು ಪ್ರಾಣಿ ಉತ್ಪನ್ನಗಳು : | * ನಾವು ಸೇವಿಸಬಹುದಾದ ಸಸ್ಯದ ಭಾಗಗಳಾದ ಬೇರು, ಎಲೆ, ಕಾಂಡ, ಹೂ, ಕಾಯಿ ಮತ್ತು ಹಣ್ಣುಗಳ ಆಹಾರಗಳನ್ನು ಅವುಗಳ ಘಟಕಾಂಶಗಳನ್ನು ಉದಾಹರಣೆಯೊಂದಿಗೆ ವಿವರಿಸುವುದು. ಹಾಗೂ ಸಸ್ಯಾಹಾರಿಗಳು, ಮಾಂಸಾಹಾರಿಗಳು ಮತ್ತು ಮಿಶ್ರಾಹಾರಿಗಳ ಬಗ್ಗೆ ತಿಳಿಸುವುದು.<br>ಉದಾ : ಬೆಂಡೆಕಾಯಿ – ಕಾಯಿ<br>ಮೆಂತೆಸೊಪ್ಪು – ಎಲೆ ಇತ್ಯಾದಿ | ಆಹಾರ ಪದಾರ್ಥಗಳ ಚಾರ್ಟ್ | ತಂತ್ರ : ವಿವರಣೆ<br>ಸಾಧನ : ಉದಾಹರಣೆಗಳು | * ಆಹಾರದ ಮೂಲವಾಗಿ ಬಳಸುವ ಸಸ್ಯದ ಭಾಗಗಳನ್ನು ಗುರುತಿಸುವರೇ? |
| **ವಿಷಯದ ವಿಸ್ತರಣೆ** | * ಮಕ್ಕಳನ್ನು ಎರಡು ಗುಂಪುಗಳಲ್ಲಿ ವಿಂಗಡಿಸಿ ಒಂದು ಗುಂಪು ಉತ್ತರ ಭಾರತದ ಆಹಾರ ಪದಾರ್ಥಗಳನ್ನು ಮತ್ತು ಇನ್ನೊಂದು ಗುಂಪು ದಕ್ಷಿಣ ಭಾರತದ ಆಹಾರ ಪದಾರ್ಥಗಳನ್ನು ಪಟ್ಟಿ ಮಾಡಲು ತಿಳಿಸುವುದು. | ಚಟುವಟಿಕೆ | ತಂತ್ರ : ವೀಕ್ಷಣೆ<br>ಸಾಧನ : ಪಟ್ಟಿ ತಯಾರಿಕೆ | * ಗುಂಪಿನಲ್ಲಿ ಎಲ್ಲರೂ ಸಕ್ರೀಯವಾಗಿ ಪಾಲ್ಗೋಳ್ಳುವರೇ? |
| **ಮೌಲ್ಯಮಾಪನ** | * ಪಠ್ಯಪುಸ್ತಕದ ಪ್ರಶ್ನೆಗಳು ಮತ್ತು ಚಟುವಟಿಕೆಗಳನ್ನು ಮಾಡಿಸಿ, ಕಪ್ಪು ಹಲಗೆಯ ಮೇಲೆ ಮಕ್ಕಳಿಂದ ಮಾಡಿಸುವುದು ಮತ್ತು ಮಾರ್ಗದರ್ಶಿಸುವುದು. | ಪಠ್ಯಪುಸ್ತಕ | ತಂತ್ರ : ಮೌಲ್ಯಮಾಪನ<br>ಸಾಧನ : ಪ್ರಶ್ನೆಗಳು | * ಎಲ್ಲಾ ಪ್ರಶ್ನೆಗಳಿಗೆ ಸರಿಯಾದ ಉತ್ತರಗಳನ್ನು ನೀಡುವರೇ? |

**ವಿಷಯ ಶಿಕ್ಷಕರ ಸಹಿ** **ಮುಖ್ಯಗುರುಗಳ ಸಹಿ**

| ವಿಷಯ : ವಿಜ್ಞಾನ | ಪಾಠ ಯೋಜನೆ | ತರಗತಿ : 6 ನೇ ತರಗತಿ |
|---|---|---|
| ಘಟಕದ ಹೆಸರು : ಆಹಾರದ ಘಟಕಗಳು | ದಿನಾಂಕ : ರಿಂದ ವರೆಗೆ | |

| ಸಾಮರ್ಥ್ಯಗಳು : | |
|---|---|
| | 1) ಆಹಾರದ ಪ್ರಮುಖ ಘಟಕಗಳ ಪ್ರಮುಖ್ಯತೆ ಅರಿಯುವುದು. |
| | 2) ಕಾರ್ಬೋಹೈಡ್ರೇಟ್ ಮತ್ತು ಕೊಬ್ಬು ನಮ್ಮ ದೇಹಕ್ಕೆ ಶಕ್ತಿ ಒದಗಿಸುವ ಪ್ರಮುಖ ಪೋಷಕಾಂಶಗಳು ಎಂದು ತಿಳಿಯುವುದು. |
| | 3) ಪ್ರೋಟೀನ್‌ಗಳು ಮತ್ತು ಖನಿಜಗಳು ನಮ್ಮ ದೇಹದ ಬೆಳವಣಿಗೆಗೆ ಅವಶ್ಯವೆಂದು ತಿಳಿಯುವುದು ಮತ್ತು ಅವುಗಳನ್ನು ಗುರುತಿಸುವುದು. |
| | 4) ನಮ್ಮ ದೇಹಕ್ಕೆ ರೋಗಗಳು ಬರದಂತೆ ವಿಟಮಿನ್‌ಗಳು ರಕ್ಷಣೆ ನೀಡುತ್ತವೆ ಎಂದು ತಿಳಿಯುವರು ಮತ್ತು ಅವುಗಳ ಕೊರತೆಯಿಂದ ಬರುವ ರೋಗಗಳನ್ನು ಅರಿಯುವರು. |
| | 5) ಸಮತೋಲಿತ ಆಹಾರದ ಅರ್ಥ ಮತ್ತು ದೇಹಾರೋಗ್ಯದ ಮಹತ್ವ ತಿಳಿಯುವರು. |

| ಕಲಿಕೆಯ ಅಂಶಗಳು | ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು | ಬೋಧನಾ–ಕಲಿಕೋಪಕರಣಗಳು | ಮೌಲ್ಯಮಾಪನ ಸಾಧನ–ತಂತ್ರಗಳು | ಶಿಕ್ಷಕರ ಸ್ವ–ಅವಲೋಕನ |
|---|---|---|---|---|
| **ತೊಡಗಿಸಿಕೊಳ್ಳುವಿಕೆ** | * ಮಕ್ಕಳನ್ನು ಗುಂಪುಗಳಲ್ಲಿ ವಿಂಗಡಿಸಿ, ಉತ್ತರ ಭಾರತದ ಆಹಾರ ಪದಾರ್ಥಗಳು ಮತ್ತು ದಕ್ಷಿಣ ಭಾರತದ ಆಹಾರ ಪದಾರ್ಥಗಳನ್ನು ಪಟ್ಟಿ ಮಾಡಲು ತಿಳಿಸುವುದು. | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ : ಪಟ್ಟಿ ಮಾಡುವುದು | * ಮಕ್ಕಳು ಚಟುವಟಿಕೆಯ ಬಗ್ಗೆ ಆಸಕ್ತಿ ಹೊಂದಿರುವರೇ? |
| **ಪತ್ತೆಹಚ್ಚುವಿಕೆ** | * ಪೂರಕ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವುದು<br>1) ನಮಗೆ ಆಹಾರ ಏಕೆ ಬೇಕು?<br>2)ಸಸ್ಯಾಹಾರಿಗಳು ಎಂದರೇನು? ಉದಾ ಕೊಡಿ.<br>3) ಮಿಶ್ರಾಹಾರಿಗಳು ಎಂದರೇನು? ಉದಾ ಕೊಡಿ. ಇತ್ಯಾದಿ | ಪೂರಕ ಪ್ರಶ್ನೆಗಳು | ತಂತ್ರ : ಅವಲೋಕನ<br>ಸಾಧನ : ಪೂರಕ ಪ್ರಶ್ನೆಗಳು | * ಮಕ್ಕಳು ಪೂರ್ವ ಜ್ಞಾನ ಸ್ಮರಿಸಿ ಉತ್ತರಿಸುವರೇ? |
| **ವಿವರಣೆ**<br>* ಆಹಾರದ ಘಟಕಗಳು : | * ನಾವು ಸೇವಿಸುವ ಆಹಾರ ಪದಾರ್ಥಗಳು ಪೋಷಕಾಂಶಗಳಾದ ಕಾರ್ಬೋಹೈಡ್ರೇಟ್‌ಗಳು, ಪ್ರೋಟೀನ್, ಕೊಬ್ಬು, ವಿಟಮಿನ್, ಖನಿಜಗಳು ಮತ್ತು ನೀರು, ನಾರು ಪದಾರ್ಥಗಳನ್ನು ಒಳಗೊಂಡಿರುತ್ತದೆ ಎಂದು ಉದಾಹರಣೆಗಳ ಮೂಲಕ ವಿವರಿಸುವದು. | ಚಿತ್ರಪಟ, | ತಂತ್ರ : ವಿವರಣೆ<br>ಸಾಧನ : ಉದಾಹರಣೆಗಳು | * ಆಹಾರದ ಘಟಕಾಂಶಗಳನ್ನು ತಿಳಿಯುವರೇ? |

| ವಿಷಯ : ವಿಜ್ಞಾನ | | ತರಗತಿ : 6 ನೇ ತರಗತಿ | | |
|---|---|---|---|---|
| **ಕಲಿಕೆಯ ಅಂಶಗಳು** | **ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು** | **ಬೋಧನಾ–ಕಲಿಕೋಪಕರಣಗಳು** | **ಮೌಲ್ಯಮಾಪನ ಸಾಧನ–ತಂತ್ರಗಳು** | **ಶಿಕ್ಷಕರ ಸ್ವ–ಅವಲೋಕನ** |
| * ಪೋಷಕಾಂಶಗಳ ಪ್ರಾಮುಖ್ಯತೆ : | * ಕಾರ್ಬೋಹೈಡ್ರೇಟ್ ಮತ್ತು ಕೊಬ್ಬು ನಮ್ಮ ದೇಹಕ್ಕೆ ಶಕ್ತಿಯನ್ನು ಒದಗಿಸುವ ಪ್ರಮುಖ ಪೋಷಕಾಂಶಗಳು ಎಂಧು ತಿಳಿಸುತ್ತಾ ಅವುಗಳ ಪರೀಕ್ಷೆಗಳನ್ನು ತಿಳಿಸುವುದು<br>* ಪ್ರೋಟೀನ್‌ಗಳು ಮತ್ತು ಖನಿಜಗಳು ನಮ್ಮ ದೇಹದ ಬೆಳವಣಿಗೆಗೆ ಅವಶ್ಯವೆಂದು ತಿಳಿಸಿ, ಪ್ರೋಟನ್ ಪರೀಕ್ಷೆಯ ಬಗ್ಗೆ ವಿವರಿಸುವುದು.<br>* ದೇಹಕ್ಕೆ ರೋಗಗಳು ಬರದಂತೆ ವಿಟಮಿನ್‌ಗಳು ರಕ್ಷಣೆ ನೀಡುತ್ತವೆ ಎಂದು ತಿಳಿಸುತ್ತಾ ಅವುಗಳ ಕೊರತೆಯಿಂದ ಬರುವ ರೋಗಗಳ ಬಗ್ಗೆ ಮನವರಿಕೆ ಮಾಡಿಕೊಡುವುದು. ರೋಗಗಳು ಮತ್ತು ಅವುಗಳ ಲಕ್ಷಣಗಳ ಬಗ್ಗೆ ತಿಳಿಸುವುದು.<br>* ಸಮತೋಲಿತ ಆಹಾರದ ಅರ್ಥ ಮತ್ತು ದೇಹಾರೋಗ್ಯದ ಮಹತ್ವದ ಬಗ್ಗೆ ತಿಳಿಸುವುದು. ಸಮತೋಲಿತ ಆಹಾರದ ಸೇವನೆಯ ಪ್ರಯೋಜನಗಳನ್ನು ತಿಳಿಸುವುದು. | ಪ್ರಯೋಗದ ಸಲಕರಣೆಗಳು, ವಿಟಮಿನ್‌ಗಳ ಚಾರ್ಟ್ | ತಂತ್ರ : ವಿವರಣೆ<br>ಸಾಧನೆ : ಉದಾಹರಣೆಗಳು | * ಆಹಾರದ ಪೋಷಕಾಂಶಗಳ ಪ್ರಮುಖ್ಯತೆ ಮತ್ತು ಸಮತೋಲಿತ ಆಹಾರದ ಮಹತ್ವವನ್ನು ತಿಳಿಯುವರೇ? |
| **ವಿಷಯದ ವಿಸ್ತರಣೆ** | * ಮಕ್ಕಳನ್ನು ಗುಂಪುಗಳಲ್ಲಿ ವಿಂಗಡಿಸಿ ಸಮತೋಲಿತ ಆಹಾರದ ಕುರಿತು ಪ್ರಬಂಧ ಬರೆಯಲು ಮಾರ್ಗದರ್ಶಿಸುವುದು. | ಚಟುವಟಿಕೆ | ತಂತ್ರ : ವೀಕ್ಷಣೆ<br>ಸಾಧನ : ಪ್ರಬಂಧ ರಚನೆ | * ನಿಯಮ ಬದ್ಧವಾಗಿ ಪ್ರಬಂಧ ರಚಿಸುವರೇ? |
| **ಮೌಲ್ಯಮಾಪನ** | * ಪಠ್ಯಪುಸ್ತಕದ ಪ್ರಶ್ನೆಗಳು ಮತ್ತು ಚಟುವಟಿಕೆಗಳನ್ನು ಮಾಡಿಸಿ, ಕಪ್ಪು ಹಲಗೆಯ ಮೇಲೆ ಮಕ್ಕಳಿಂದ ಮಾಡಿಸುವುದು ಮತ್ತು ಮಾರ್ಗದರ್ಶಿಸುವುದು. | ಪಠ್ಯಪುಸ್ತಕ | ತಂತ್ರ : ಮೌಲ್ಯಮಾಪನ<br>ಸಾಧನ : ಪ್ರಶ್ನೆಗಳು | * ಎಲ್ಲಾ ಪ್ರಶ್ನೆಗಳಿಗೆ ಸರಿಯಾದ ಉತ್ತರಗಳನ್ನು ನೀಡುವರೇ? |

**ವಿಷಯ ಶಿಕ್ಷಕರ ಸಹಿ** **ಮುಖ್ಯಗುರುಗಳ ಸಹಿ**

| ವಿಷಯ : ವಿಜ್ಞಾನ | ಪಾಠ ಯೋಜನೆ | ತರಗತಿ : 6 ನೇ ತರಗತಿ |
|---|---|---|
| ಘಟಕದ ಹೆಸರು : ಎಳೆಯಿಂದ ಬಟ್ಟೆ | ದಿನಾಂಕ : ರಿಂದ ವರೆಗೆ | |

| ಸಾಮರ್ಥ್ಯಗಳು : | |
|---|---|
| | 1) ಉಡುಪಿನ ಬಟ್ಟೆಗಳಲ್ಲಿ ವೈವಿಧ್ಯವಿದೆ ಹಾಗೂ ಹತ್ತಿ, ರೇಷ್ಮೆ ಮತ್ತು ಪಾಲಿಸ್ಟರ್ ಬಟ್ಟೆಗಳಿವೆ ಎಂದು ತಿಳಿಯುವುದು. |
| | 2) ಬಟ್ಟೆಗಳು ನೂಲುಗಳಿಂದ ಆಗಿದ್ದರೆ, ನೂಲುಗಳು ನಾರುಗಳಿಂದ ಆಗಿವೆ ಎಂದು ಅರಿಯುವುದು. |
| | 3) ನಾರುಗಳ ವಿಧಗಳಾದ ನೈಸರ್ಗಿಕ ನಾರುಗಳು ಮತ್ತು ಸಂಶ್ಲೇಷಿತ ನಾರುಗಳ ಬಗ್ಗೆ ತಿಳಿಯುವುದು. |
| | 4) ಸಸ್ಯ ಜನ್ಯ ನಾರುಗಳು ಮತ್ತು ಪ್ರಾಣಿ ಜನ್ಯ ನಾರುಗಳ ಬಗ್ಗೆ ತಿಳಿಯುವರು. |
| | 5) ನೂಲುವ ನೇಯುವ ಪ್ರಕ್ರಿಯೆಗಳನ್ನು ತಿಳಿದು, ಇವುಗಳಿಂದ ಬಟ್ಟೆ ತಯಾರಿಸಲಾಗುತ್ತದೆ ಎಂಬುದನ್ನು ಅರ್ಥೈಸಿಕೊಳ್ಳುವುದು. |

| ಕಲಿಕೆಯ ಅಂಶಗಳು | ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು | ಬೋಧನಾ–ಕಲಿಕೋಪಕರಣಗಳು | ಮೌಲ್ಯಮಾಪನ ಸಾಧನ–ತಂತ್ರಗಳು | ಶಿಕ್ಷಕರ ಸ್ವ–ಅವಲೋಕನ |
|---|---|---|---|---|
| **ತೊಡಗಿಸಿಕೊಳ್ಳುವಿಕೆ** | * ಮಕ್ಕಳನ್ನು ಗುಂಪುಗಳಲ್ಲಿ ವಿಂಗಡಿಸಿ ನಮಗೆ ಜೀವಿಸಲು ಬೇಕಾಗಿರುವ ಮೂಲಭುತ ಅವಶ್ಯಕತೆಗಳ ಬಗ್ಗೆ ಚರ್ಚಿಸಿ ಪಟ್ಟಿ ಮಾಡಲು ತಿಳಿಸುವುದು. | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ : ಪಟ್ಟಿ ಮಾಡುವುದು | * ಮಕ್ಕಳು ಮೂಲಭೂತ ಅವಶ್ಯಕತೆಗಳನ್ನು ಗುರುತಿಸುವರೇ? |
| **ಪತ್ತೆಹಚ್ಚುವಿಕೆ** | * ಮಕ್ಕಳ ಗುಂಪುಗಳಿಗೆ ನಾವು ಧರಿಸುವ ವಿವಿಧ ತರಹದ ಉಡುಪುಗಳನ್ನು ಗುರುತಿಸಿ ಪಟ್ಟಿ ಮಾಡಲು ಹೇಳುವುದು. | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ : ಪಟ್ಟಿ ಮಾಡುವುದು | * ಗುಂಪಿನಲ್ಲಿ ಪರಸ್ಪರ ಚರ್ಚಿಸುವರೇ? |
| **ವಿವರಣೆ**<br>* ಬಟ್ಟೆಗಳಲ್ಲಿ ವೈವಿಧ್ಯತೆ : | * ಬಟ್ಟೆಗಳನ್ನು ಹತ್ತಿ, ರೇಷ್ಮೆ ಉಣ್ಣೆ, ನೈಲಾನ್, ಪಾಲಿಸ್ಟರ್ ನೂಲುಗಳಿಂದ ತಯಾರಿಸಲಾಗುತ್ತದೆ. ಎಂದು ತಿಳಿಸುತ್ತಾ, ಹತ್ತಿ, ಸೆಣಬು ಇವು ಸಸ್ಯ ಜನ್ಯ ನಾರುಗಳು ಹಾಗೂ ರೇಷ್ಮೆ, ಉಣ್ಣೆ ಇವು ಪ್ರಾಣಿ ಜನ್ಯ ಮೂಲ ಹಾಗೂ ನೈಲಾನ್, ಪಾಲಿಸ್ಟರ್ ಇವು ಕೃತಕ ನಾರುಗಳಾಗಿವೆ ಎಂಬುದನ್ನು ಬಟ್ಟೆಗಳ ಮಾದರಿ ಯೊಂದಿಗೆ ವಿವರಿಸುವುದು. | ಬಟ್ಟೆಗಳ ಮಾದರಿಗಳು | ತಂತ್ರ : ವಿವರಣೆ<br>ಸಾಧನ : ಉದಾಹರಣೆಗಳು | * ಸಸ್ಯ ನಾರು, ಸಂಶ್ಲೇಷಿತ ನಾರುಗಳ ಕುರಿತು ತಿಳಿಯುವರೇ? |

| ವಿಷಯ : ವಿಜ್ಞಾನ | | ತರಗತಿ : 6 ನೇ ತರಗತಿ | | |
|---|---|---|---|---|
| **ಕಲಿಕೆಯ ಅಂಶಗಳು** | **ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು** | **ಬೋಧನಾ-ಕಲಿಕೋಪಕರಣಗಳು** | **ಮೌಲ್ಯಮಾಪನ ಸಾಧನ-ತಂತ್ರಗಳು** | **ಶಿಕ್ಷಕರ ಸ್ವ-ಅವಲೋಕನ** |
| * ಬಟ್ಟೆ ತಯಾರಿಕೆಯ ಹಂತಗಳು : | * ನೂಲನ್ನು ತೆಗೆಯುವುದು, ನೂಲುಗಳನ್ನು ನೇಯುವುದರಿಂದ ಮತ್ತು ಹೆಣೆಯುವುದರ ಮೂಲಕ ಬಟ್ಟೆಯನ್ನು ತಯಾರಿಸಲಾಗುತ್ತದೆ, ಎಂಬುದನ್ನು ಉದಾಹರಣೆಗಳ ಮೂಲಕ ವಿವರಿಸುವುದು ಹಾಗೂ ಉಡುಪಿನ ಸಂಕ್ಷಿಪ್ತ ಇತಿಹಾಸವನ್ನು ತಿಳಿಸುವುದು. | ವಿಡಿಯೋ | ತಂತ್ರ : ವಿವರಣೆ<br>ಸಾಧನ : ವಿಡಿಯೋ | * ನೇಯುವುದು, ಹೆಣೆಯುವುದರ ಬಗ್ಗೆ ತಿಳಿಯುವರೇ? |
| **ವಿಷಯದ ವಿಸ್ತರಣೆ** | * ಮಕ್ಕಳನ್ನು ಗುಂಪುಗಳಲ್ಲಿ ವಿಂಗಡಿಸಿ ಸಮತೋಲಿತ ಆಹಾರದ ಕುರಿತು ಪ್ರಬಂಧ ಬರೆಯಲು ಮಾರ್ಗದರ್ಶಿಸುವುದು. | ಚಟುವಟಿಕೆ | ತಂತ್ರ : ವೀಕ್ಷಣೆ<br>ಸಾಧನ : ಪ್ರಬಂಧ ರಚನೆ | * ನಿಯಮ ಬದ್ಧವಾಗಿ ಪ್ರಬಂಧ ರಚಿಸುವರೇ? |
| **ಮೌಲ್ಯಮಾಪನ** | * ಪಠ್ಯಪುಸ್ತಕದ ಪ್ರಶ್ನೆಗಳು ಮತ್ತು ಚಟುವಟಿಕೆಗಳನ್ನು ಮಾಡಿಸಿ, ಕಪ್ಪು ಹಲಗೆಯ ಮೇಲೆ ಮಕ್ಕಳಿಂದ ಮಾಡಿಸುವುದು ಮತ್ತು ಮಾರ್ಗದರ್ಶಿಸುವುದು. | ಪಠ್ಯಪುಸ್ತಕ | ತಂತ್ರ : ಮೌಲ್ಯಮಾಪನ<br>ಸಾಧನ : ಪ್ರಶ್ನೆಗಳು | * ಎಲ್ಲಾ ಪ್ರಶ್ನೆಗಳಿಗೆ ಸರಿಯಾದ ಉತ್ತರಗಳನ್ನು ನೀಡುವರೇ? |

**ವಿಷಯ ಶಿಕ್ಷಕರ ಸಹಿ** **ಮುಖ್ಯಗುರುಗಳ ಸಹಿ**

| ವಿಷಯ : ವಿಜ್ಞಾನ | ಪಾಠ ಯೋಜನೆ | ತರಗತಿ : 6 ನೇ ತರಗತಿ |
|---|---|---|
| ಘಟಕದ ಹೆಸರು : ಪದಾಥಗಳನ್ನು ಗುಂಪುಗಳಾಗಿ ವರ್ಗೀಕರಿಸುವುದು | ದಿನಾಂಕ : ರಿಂದ ವರೆಗೆ | |

| ಸಾಮರ್ಥ್ಯಗಳು : | |
|---|---|
| | 1) ನಮ್ಮ ಸುತ್ತಲಿನ ವಸ್ತುಗಳು ಹಲವಾರು ರೀತಿಯ ಪದಾರ್ಥಗಳಿಂದ ಮಾಡಲ್ಪಟ್ಟಿವೆ ಎಂಬುದನ್ನು ತಿಳಿಯುವುದು. |
| | 2) ಪದಾರ್ಥಗಳನ್ನು ಹೊಳಪುಳ್ಳ, ಒರಟಾದ, ನಯ, ಕಠಿಣ, ಮೃದು, ನೀರಿನಲ್ಲಿ ಕರಗುವ, ಕರಗದ ವಸ್ತಗಳಾಗಿ ವರ್ಗೀಕರಿಸುವುದು. |
| | 3) ಪಾರದರ್ಶಕ, ಅಪಾರದರ್ಶಕ ಮತ್ತು ಮಿತ ಪಾರದರ್ಶಕ ವಸ್ತುಗಳ ಬಗ್ಗೆ ತಿಳಿಯುವುದು ಮತ್ತು ಗುರುತಿಸುವುದು. |
| | 4) ಪದಾರ್ಥಗಳ ಗುಣಗಳ ಸಾಮ್ಯತೆ ಮತ್ತು ವ್ಯತ್ಯಾಸಗಳ ಆಧಾರದ ಮೇಲೆ ವಸ್ತುಗಳನ್ನು ವರ್ಗೀಕರಿಸುವುದರ ಬಗ್ಗೆ ತಿಳಿಯುವುದು. |

| ಕಲಿಕೆಯ ಅಂಶಗಳು | ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು | ಬೋಧನಾ–ಕಲಿಕೋಪಕರಣಗಳು | ಮೌಲ್ಯಮಾಪನ ಸಾಧನ–ತಂತ್ರಗಳು | ಶಿಕ್ಷಕರ ಸ್ವ–ಅವಲೋಕನ |
|---|---|---|---|---|
| ತೊಡಗಿಸಿಕೊಳ್ಳುವಿಕೆ | * ಮಕ್ಕಳನ್ನು ಗುಂಪುಗಳಲ್ಲಿ ವಿಂಗಡಿಸಿ ತಮ್ಮ ಸುತ್ತಲಿನ ವಸ್ತುಳನ್ನು ಪಟ್ಟಿ ಮಾಡಲು ತಿಳಿಸುವುದು. | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ : ಪಟ್ಟಿ ಮಾಡುವುದು | * ಸುತ್ತ ಮುತ್ತಲಿನ ವಸ್ತುಗಳನ್ನು ಪಟ್ಟಿ ಮಾಡುವರೇ? |
| ಪತ್ತೆಹಚ್ಚುವಿಕೆ | * ಮಕ್ಕಳು ಗುಂಪುಗಳಲ್ಲಿ ಪಟ್ಟಿ ಮಾಡಿದ ವಸ್ತುಗಳನ್ನು ಜೈವಿಕ ವಸ್ತುಗಳು ಮತ್ತು ಅಜೈವಿಕ ವಸ್ತುಗಳಾಗಿ ವಿಂಗಡಿಸಲು ಹೇಳುವುದು. | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ : ಅವಲೋಕನ ಪಟ್ಟಿ | * ಜೈವಿಕ ಮತ್ತು ಅಜೈವಿಕ ವಸ್ತುಗಳಾಗಿ ವಿಂಗಡಿಸುತ್ತಾರೆಯೇ? |
| ವಿವರಣೆ<br>* ವಸ್ತುಗಳ ವರ್ಗೀಕರಣ :<br>* ಪದಾರ್ಥಗಳ ಗುಣಗಳು : | * ನಮ್ಮ ಸುತ್ತಮುತ್ತಲಿನ ವಸ್ತುಗಳ ಬಗ್ಗೆ ವಿವರಿಸುತ್ತಾ ಪದಾರ್ಥಗಳಲ್ಲಿನ ಗುಣಗಳ ಸಾಮ್ಯತೆ ಮತ್ತು ವ್ಯತ್ಯಾಸಗಳ ಆಧಾರದ ಮೇಲೆ ವಸ್ತುಗಳನ್ನು ಗುಂಪು ಮಾಡಲಾಗುತ್ತದೆ, ಎಂದು ಉದಾ ಹರಣೆಗಳ ಮೂಲಕ ವಿವರಿಸುವುದು.<br>* ಪದಾರ್ಥಗಳ ಗುಣಗಳನ್ನು ತಿಳಿಸುತ್ತಾ, ಪದಾರ್ಥಗಳಲ್ಲಿ ಕರಗುವ, ಕರಗದಿರುವ, ಕಠಿಣ, ನಯ, ತೇಲುವ, ಮುಳುಗುವ, ಪಾರದರ್ಶಕ, ಅಪಾರದರ್ಶಕ, ಮತ್ತು ಮಿತ ಪಾರದರ್ಶಕ ವಸ್ತುಗಳ ಗುಣ ಲಕ್ಷಣಗಳನ್ನು ಉದಾಹರಣೆಗಳ ಮೂಲಕ ಮತ್ತು ಪ್ರಾಯೋಗಿಕ ಚಟುವಟಿಕೆಗಳ ಮೂಲಕ ವಿವರಿಸುವುದು. | ವಿವಿಧ ರೀತಿಯ ವಸ್ತುಗಳು | ತಂತ್ರ : ವಿವರಣೆ<br>ಸಾಧನ : ಉದಾಹರಣೆಗಳು | * ವಸ್ತುಗಳ ವರ್ಗೀಕರಣದ ಕುರಿತು ತಿಳಿಯುವರೇ?<br>* ಪದಾರ್ಥಗಳ ಗುಣಗಳನ್ನು ತಿಳಿದು ಗುಂಪು ಮಾಡುವರೇ? |

| ವಿಷಯ : ವಿಜ್ಞಾನ | | ತರಗತಿ : 6 ನೇ ತರಗತಿ | | |
|---|---|---|---|---|
| **ಕಲಿಕೆಯ ಅಂಶಗಳು** | **ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು** | **ಬೋಧನಾ-ಕಲಿಕೋಪಕರಣಗಳು** | **ಮೌಲ್ಯಮಾಪನ ಸಾಧನ-ತಂತ್ರಗಳು** | **ಶಿಕ್ಷಕರ ಸ್ವ-ಅವಲೋಕನ** |
| **ವಿಷಯದ ವಿಸ್ತರಣೆ** | * ಮಕ್ಕಳಿಗೆ 20 ವಸ್ತುಗಳ ಹೆಸರುಗಳನ್ನು ಬರೆಯಿಸಿ, ಅವುಗಳನ್ನು ಗುಣಗಳ ಆಧಾರದ ಮೇಲೆ ವಿಂಗಡಿಸಲು ಹೇಳುವುದು. | ಚಟುವಟಿಕೆ | ತಂತ್ರ : ಅವಲೋಕನ<br>ಸಾಧನ : ಅವಲೋಕನ ಪಟ್ಟಿ | * ವಸ್ತುಗಳನ್ನು ಗುಣಗಳ ಆಧಾರದ ಮೇಲೆ ಸರಿಯಾಗಿ ವರ್ಗೀಕರಿಸುವರೇ? |
| **ಮೌಲ್ಯಮಾಪನ** | * ಪಠ್ಯಪುಸ್ತಕದ ಪ್ರಶ್ನೆಗಳು ಮತ್ತು ಚಟುವಟಿಕೆಗಳನ್ನು ಮಾಡಿಸಿ, ಕಪ್ಪು ಹಲಗೆಯ ಮೇಲೆ ಮಕ್ಕಳಿಂದ ಮಾಡಿಸುವುದು ಮತ್ತು ಮಾರ್ಗದರ್ಶಿಸುವುದು. | ಪಠ್ಯಪುಸ್ತಕ | ತಂತ್ರ : ಮೌಲ್ಯಮಾಪನ<br>ಸಾಧನ : ಪ್ರಶ್ನೆಗಳು | * ಎಲ್ಲಾ ಪ್ರಶ್ನೆಗಳಿಗೆ ಸರಿಯಾದ ಉತ್ತರಗಳನ್ನು ನೀಡುವರೇ? |

**ವಿಷಯ ಶಿಕ್ಷಕರ ಸಹಿ** **ಮುಖ್ಯಗುರುಗಳ ಸಹಿ**

| ವಿಷಯ : ವಿಜ್ಞಾನ | ಪಾಠ ಯೋಜನೆ | ತರಗತಿ : 6 ನೇ ತರಗತಿ |
|---|---|---|
| ಘಟಕದ ಹೆಸರು : ಪದಾರ್ಥಗಳನ್ನು ಬೇರ್ಪಡಿಸುವಿಕೆ | ದಿನಾಂಕ : ರಿಂದ | ವರೆಗೆ |

| ಸಾಮರ್ಥ್ಯಗಳು : | |
|---|---|
| | 1) ಕೈ ಯಿಂದ ಆರಿಸುವಿಕೆ, ತೂರುವಿಕೆ, ಜರಡಿ ಹಿಡಿಯುವಿಕೆ, ಗುರುತ್ವ ಬಲದಿಂದ ಬೇರ್ಪಡಿಸುವಿಕೆ, ಸೋಸುವಿಕೆ, ಬಸಿಯುವಿಕೆ ಇವು ಬೇರ್ಪಡಿಸುವ ವಿಧಾನಗಳೆಂದು ತಿಳಿಯುವುದು. |
| | 2) ಕರಗಿರುವ ಘನ ವಸ್ತುಗಳನ್ನು ಬೇರ್ಪಡಿಸಲು ಆವೀಕರಣ ವಿಧಾನದ ಬಗ್ಗೆ ತಿಳಿಯುವುದು. |
| | 3) ಪರ್ಯಾಪ್ತ ದ್ರಾವಣವನ್ನು ಅರ್ಥೈಸುವುದು ಮತ್ತು ಗುರುತಿಸುವುದು ದ್ರಾವಣವನ್ನು ಕಾಯಿಸುವುದರಿಂದ ಅದರಲ್ಲಿನ ಹೆಚ್ಚಿನ ಪ್ರಮಾಣದ ಪದಾರ್ಥಗಳನ್ನು ಕರಗಿಸಬಹುದೆಂದು ತಿಳಿಯುವುದು. |
| | 4) ಸಾರ್ವತ್ರಿಕ ದ್ರಾವಕ ಮತ್ತು ಸಾರ್ವತ್ರಿಕ ದ್ರಾವಣದ ಬಗ್ಗೆ ತಿಳಿಯುವುದು. |

| ಕಲಿಕೆಯ ಅಂಶಗಳು | ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು | ಬೋಧನಾ–ಕಲಿಕೋಪಕರಣಗಳು | ಮೌಲ್ಯಮಾಪನ ಸಾಧನ–ತಂತ್ರಗಳು | ಶಿಕ್ಷಕರ ಸ್ವ–ಅವಲೋಕನ |
|---|---|---|---|---|
| ತೊಡಗಿಸಿಕೊಳ್ಳುವಿಕೆ | * ಮಕ್ಕಳನ್ನು ಗುಂಪುಗಳಲ್ಲಿ ವಿಂಗಡಿಸಿ ತಾವು ಮನೆಯಲ್ಲಿ ಮಾಡುವ ಚಟುವಟಿಕೆಗಳನ್ನು ಪಟ್ಟಿ ಮಾಡಲು ತಿಳಿಸುವುದು. | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ : ಪಟ್ಟಿ ಮಾಡುವುದು | * ಮನೆಯಲ್ಲಿನ ಚಟುವಟಿಕೆಗಳನ್ನು ಪಟ್ಟಿ ಮಾಡುವರೇ? |
| ಪತ್ತೆಹಚ್ಚುವಿಕೆ | * ತಮ್ಮ ಸುತ್ತಲಿರುವ ಮಿಶ್ರಣಗಳನ್ನು ಪಟ್ಟಿ ಮಾಡಿ, ಗುಂಪುಗಳಲ್ಲಿ ಮಿಶ್ರಣದ ಘಟಕಗಳ ಬಗ್ಗೆ ಚರ್ಚಿಸಲು ತಿಳಿಸುವುದು. | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ : ಚರ್ಚೆ | * ಮಿಶ್ರಣಗಳನ್ನು ಗುರ್ತಿಸಿ ಗುಂಪುಗಳಲ್ಲಿ ಪಟ್ಟಿ ಮಾಡುವರೇ? |
| ವಿವರಣೆ<br>* ಪದಾರ್ಥಗಳನ್ನು ಬೇರ್ಪಡಿಸುವ ವಿಧಾನಗಳು : | * ದೈನಂದಿನ ಜೀವನದಲ್ಲಿ ಬೇರ್ಪಡಿಸುವಿಕೆಯ ಕುರಿತು ತಿಳಿಸುತ್ತಾ, ಬೇರ್ಪಡಿಸುವಿಕೆಯ ಮಹತ್ವವನ್ನು ವಿವರಿಸು ವುದು ಬೇರ್ಪಡಿಸುವ ವಿಧಾನಗಳಾದ ಕೈಯಿಂದ ಆರಿ ಸುವಿಕೆ, ತೂರುವಿಕೆ, ಜರಡಿ ಹಿಡಿಯುವಿಕೆ, ಗುರುತ್ವ ಬಲ ದಿಂದ ಬೇರ್ಪಡಿಸುವಿಕೆ, ಸೋಸುವಿಕೆ, ಬಸಿಯುವಿಕೆ ಇವು ಗಳ ಕುರಿತು ಉದಾಹರಣೆಗಳ ಮೂಲಕ ವಿವರಿಸುವುದು. | ಮಿಶ್ರಣಗಳು, ಪ್ರಯೋಗ ಸಲಕರಣೆಗಳು | ತಂತ್ರ : ವಿವರಣೆ<br>ಸಾಧನ : ಉದಾಹರಣೆಗಳು | * ಪದಾರ್ಥಗಳನ್ನು ಬೇರ್ಪಡಿಸುವಿಕೆ ಮಹತ್ವ ಮತ್ತು ಬೇರ್ಪಡಿಸುವಿಕೆಯ ವಿಧಾನಗಳನ್ನು ತಿಳಿಯುವರೇ? |

| ವಿಷಯ : ವಿಜ್ಞಾನ | | ತರಗತಿ : 6 ನೇ ತರಗತಿ | | |
|---|---|---|---|---|
| **ಕಲಿಕೆಯ ಅಂಶಗಳು** | **ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು** | **ಬೋಧನಾ-ಕಲಿಕೋಪಕರಣಗಳು** | **ಮೌಲ್ಯಮಾಪನ ಸಾಧನ-ತಂತ್ರಗಳು** | **ಶಿಕ್ಷಕರ ಸ್ವ-ಅವಲೋಕನ** |
| * ಗುರುತ್ವ ಬಲದಿಂದ ಬೇರ್ಪಡಿಸುವಿಕೆ, ಬಸಿಯುವಿಕೆ ಮತ್ತು ಸೋಸುವಿಕೆ ; | * ನೀರು ಮತ್ತು ಎಣ್ಣೆಯ ಮಿಶ್ರಣವನ್ನು ಗುರುತ್ವ ಬಲದಿಂದ, ಚಹಾದಲ್ಲಿರುವ ಎಲೆಗಳನ್ನು ಸೋಸುವಿಕೆ ವಿಧಾನದಿಂದ, ಮರಳು ಮತ್ತು ಉಪ್ಪಿನ ಮಿಶ್ರಣವನ್ನು ಆವೀಕರಣ ಮತ್ತು ಸಾಂದ್ರೀಕರಣ ವಿಧಾನದಿಂದ ಬೇರ್ಪಡಿಸುವದನ್ನು ಪ್ರಯೋಗಿಕವಾಗಿ ವಿವರಿಸುವುದು. | ಮಿಶ್ರಣಗಳು, ಪ್ರಯೋಗ ಸಲಕರಣೆಗಳು | ತಂತ್ರ : ವಿವರಣೆ<br>ಸಾಧನ : ಪ್ರಯೋಗಗಳು | * ಬೇರ್ಪಡಿಸುವಿಕೆಯ ವಿಧಾನಗಳನ್ನು ತಿಳಿಯುವರೇ? |
| **ವಿಷಯದ ವಿಸ್ತರಣೆ** | * ಮಕ್ಕಳಿಗೆ ಗುಂಪುಗಳಲ್ಲಿ ಬೇರ್ಪಡಿಸುವಿಕೆಯ ವಿಧಾನಗಳ ಚಿತ್ರಗಳನ್ನು ರಚಿಸಿ, ಚಿತ್ರ ಸಂಪುಟ ತಯಾರಿಸಲು ಹೇಳುವುದು. | ಚಟುವಟಿಕೆ | ತಂತ್ರ : ಅವಲೋಕನ<br>ಸಾಧನ : ಅವಲೋಕನ ಪಟ್ಟಿ | * ಚಿತ್ರ ಸಂಪುಟ ರಚನೆಯನ್ನು ಗುಂಪಿನ ಸಮನ್ವಯತೆಯಿಂದ ಮಾಡುವರೇ? |
| **ಮೌಲ್ಯಮಾಪನ** | * ಪಠ್ಯಪುಸ್ತಕದ ಪ್ರಶ್ನೆಗಳು ಮತ್ತು ಚಟುವಟಿಕೆಗಳನ್ನು ಮಾಡಿಸಿ, ಕಪ್ಪು ಹಲಗೆಯ ಮೇಲೆ ಮಕ್ಕಳಿಂದ ಮಾಡಿಸುವುದು ಮತ್ತು ಮಾರ್ಗದರ್ಶಿಸುವುದು. | ಪಠ್ಯಪುಸ್ತಕ | ತಂತ್ರ : ಮೌಲ್ಯಮಾಪನ<br>ಸಾಧನ : ಪ್ರಶ್ನೆಗಳು | * ಎಲ್ಲಾ ಪ್ರಶ್ನೆಗಳಿಗೆ ಸರಿಯಾದ ಉತ್ತರಗಳನ್ನು ನೀಡುವರೇ? |

**ವಿಷಯ ಶಿಕ್ಷಕರ ಸಹಿ** **ಮುಖ್ಯಗುರುಗಳ ಸಹಿ**

| ವಿಷಯ : ವಿಜ್ಞಾನ | ಪಾಠ ಯೋಜನೆ | ತರಗತಿ : 6 ನೇ ತರಗತಿ |
|---|---|---|
| ಘಟಕದ ಹೆಸರು : ನಮ್ಮ ಸುತ್ತಲಿನ ಬದಲಾವಣೆಗಳು | ದಿನಾಂಕ : ರಿಂದ | ವರೆಗೆ |

| | |
|---|---|
| ಸಾಮರ್ಥ್ಯಗಳು : | 1) ಪರಾವರ್ತಿತಗೊಳ್ಳುವ, ಪರಾವರ್ತಿತಗೊಳ್ಳದ ಬದಲಾವಣೆಗಳ ಬಗ್ಗೆ ತಿಳಿಯುವುದು. |
| | 2) ಶಾಖ ಮತ್ತು ತಾಪದಿಂದ ವಸ್ತುವಿನಲ್ಲಿ ಕುಗ್ಗುವುದು, ಆವಿಯಾಗುವುದು, ಹಿಗ್ಗುವುದು, ದ್ರವಿಸುವಂತಹ ಬದಲಾವಣೆಗಳನ್ನು |
| | ಅರ್ಥೈಸಿಕೊಳ್ಳುವುದು. |
| | 3) ಒಂದು ಪದಾರ್ಥವನ್ನು ಕಾಯಿಸುವುದರಿಂದ ಅಥವಾ ಅದನ್ನು ಬೇರೆ ಪದಾರ್ಥಗಳೊಂದಿಗೆ ಬೆರೆಸುವುದರಿಂದ ಬದಲಾವಣೆ ಉಂಟಾಗ |
| | ಬಹುದುದೆಂದು ತಿಳಿಯುವುದು. |

| ಕಲಿಕೆಯ ಅಂಶಗಳು | ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು | ಬೋಧನಾ– ಕಲಿಕೋಪಕರಣಗಳು | ಮೌಲ್ಯಮಾಪನ ಸಾಧನ–ತಂತ್ರಗಳು | ಶಿಕ್ಷಕರ ಸ್ವ– ಅವಲೋಕನ |
|---|---|---|---|---|
| **ತೊಡಗಿಸಿಕೊಳ್ಳುವಿಕೆ** | * ಮಕ್ಕಳ ಗುಂಪುಗಳಿಗೆ ತಮ್ಮ ಸುತ್ತ ಮುತ್ತಲಿನ ಪರಿಸರದಲ್ಲಿ ಕಂಡುಬರುವ ಬದಲಾವಣೆಗಳನ್ನು ಗುರುತಿಸಿ ಪಟ್ಟಿ ಮಾಡಲು ತಿಳಿಸುವುದು. | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ : ಪಟ್ಟಿ ಮಾಡುವುದು | * ಬದಲಾವಣೆಗಳನ್ನು ಗುರುತಿಸಿ ಪಟ್ಟಿ ಮಾಡುವರೇ? |
| **ಪತ್ತೆಹಚ್ಚುವಿಕೆ** | * ನಮ್ಮ ಸುತ್ತ ಮುತ್ತಲಿನ ಬದಲಾವಣೆಗಳಿಗೆ ಕಾರಣಗಳನ್ನು ಪತ್ತೆ ಹಚ್ಚುವಂತೆ ಮಕ್ಕಳ ಗುಂಪಿಗೆ ತಿಳಿಸುವುದು | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ :ಅವಲೋಕನ ಪಟ್ಟಿ | * ಗುಂಪಿನಲ್ಲಿ ಪರಸ್ಪರ ಚರ್ಚಿಸುವರೇ? |
| **ವಿವರಣೆ**<br>* ಬದಲಾವಣೆಗಳು :<br><br>* ಬದಲಾವಣೆ ವಿಧಗಳು ಮತ್ತು ಕಾರಣಗಳು : | * ಬದಲಾವಣೆಯ ಅರ್ಥವನ್ನು ತಿಳಿಸುತ್ತಾ ಬದಲಾವಣೆಗಳ ಕುರಿತು ಮಕ್ಕಳೊಂದಿಗೆ ಚರ್ಚಿಸುವುದು ಹಾಗೂ ಉದಾಹರಣೆಗಳನ್ನು ನೀಡುವುದು.<br><br>* ಬದಲಾವಣೆಯನ್ನು ಪರಾವರ್ತಿತಗೊಳಿಸಬಹುದಾದ ಬದಲಾವಣೆ ಮತ್ತು ಪರಾವರ್ತಿತಗೊಳಿಸಲು ಸಾಧ್ಯವಿಲ್ಲದ ಬದಲಾವಣೆಗಳೆಂದು ವಿಂಗಡಿಸಬಹುದು ಎಂದು ತಿಳಿಸುತ್ತಾ ಉದಾಹರಣೆಗಳನ್ನು ನೀಡುವುದು. | ಪ್ರಯೋಗ ಸಾಮಗ್ರಿಗಳು | ತಂತ್ರ : ಪ್ರಾತ್ಯಕ್ಷಿಕೆ<br>ಸಾಧನ : ಪ್ರಯೋಗಗಳು | * ಬದಲಾವಣೆಯ ವಿಧಾನಗಳನ್ನು ಗುರುತಿಸುವರೇ? |

| ವಿಷಯ : ವಿಜ್ಞಾನ | | ತರಗತಿ : 6 ನೇ ತರಗತಿ | | |
|---|---|---|---|---|
| **ಕಲಿಕೆಯ ಅಂಶಗಳು** | **ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು** | **ಬೋಧನಾ–ಕಲಿಕೋಪಕರಣಗಳು** | **ಮೌಲ್ಯಮಾಪನ ಸಾಧನ–ತಂತ್ರಗಳು** | **ಶಿಕ್ಷಕರ ಸ್ವ–ಅವಲೋಕನ** |
| * ಬದಲಾವಣೆ ವಿಧಗಳು ಮತ್ತು ಕಾರಣಗಳು : | * ವಸ್ತುಗಳಿಗೆ ತಾಪವನ್ನು ನೀಡುವುದರಿಂದ ಹಿಗ್ಗುವಿಕೆ, ಕುಗ್ಗುವಿಕೆ, ಆವಿಯಾಗುವಿಕೆ, ದ್ರವಿಸುವಿಕೆಯಂತಹ ಬದಲಾವಣೆಗಳನ್ನುಂಟು ಮಾಡಬಹುದೆಂದು ಉದಾಹರಣೆಗಳ ಮೂಲಕ ವಿವರಿಸುವುದು. | ಪ್ರಯೋಗ ಸಾಮಗ್ರಿಗಳು | ತಂತ್ರ : ಪ್ರಾತ್ಯಕ್ಷಿಕೆ ಸಾಧನ : ಪ್ರಯೋಗಗಳು | * ವಸ್ತುಗಳ ಮೇಲೆ ತಾಪದ ಪರಿಣಾಮಗಳನ್ನು ತಿಳಿಯುವರೇ? |
| **ವಿಷಯದ ವಿಸ್ತರಣೆ** | * ನಿಮ್ಮ ಸುತ್ತಲೂ ಕಂಡು ಬರುವ ಪರಾವರ್ತಗೊಳಿಸ ಬಹುದಾದ ಮತ್ತು ಪರಾವರ್ತಗೊಳಿಸಲಾರದ ಬದಲಾವಣೆಗಳಿಗೆ 5 ಉದಾಹರಣೆಗಳನ್ನು ನೀಡಲು ತಿಳಿಸುವುದು. | ಚಟುವಟಿಕೆ | ತಂತ್ರ : ಅವಲೋಕನ ಸಾಧನ :ಅವಲೋಕನ ಪಟ್ಟಿ | * ಸರಿಯಾದ ಉದಾಹರಣೆಗಳನ್ನು ಪಟ್ಟಿ ಮಾಡುವರೇ? |
| **ಮೌಲ್ಯಮಾಪನ** | * ಪಠ್ಯಪುಸ್ತಕದ ಪ್ರಶ್ನೆಗಳು ಮತ್ತು ಚಟುವಟಿಕೆಗಳನ್ನು ಮಾಡಿಸಿ, ಕಪ್ಪು ಹಲಗೆಯ ಮೇಲೆ ಮಕ್ಕಳಿಂದ ಮಾಡಿಸುವುದು ಮತ್ತು ಮಾರ್ಗದರ್ಶಿಸುವುದು. | ಪಠ್ಯಪುಸ್ತಕ | ತಂತ್ರ : ಮೌಲ್ಯಮಾಪನ ಸಾಧನ : ಪ್ರಶ್ನೆಗಳು | * ಎಲ್ಲಾ ಪ್ರಶ್ನೆಗಳಿಗೆ ಸರಿಯಾದ ಉತ್ತರಗಳನ್ನು ನೀಡುವರೇ? |

**ವಿಷಯ ಶಿಕ್ಷಕರ ಸಹಿ** **ಮುಖ್ಯಗುರುಗಳ ಸಹಿ**

| ವಿಷಯ : ವಿಜ್ಞಾನ | ಪಾಠ ಯೋಜನೆ | ತರಗತಿ : 6 ನೇ ತರಗತಿ |
|---|---|---|
| ಘಟಕದ ಹೆಸರು : ಸಸ್ಯಗಳನ್ನು ತಿಳಿಯುವುದು | ದಿನಾಂಕ : ರಿಂದ ವರೆಗೆ | |

| | |
|---|---|
| **ಸಾಮರ್ಥ್ಯಗಳು :** | 1) ಸಸ್ಯಗಳ ಎತ್ತರ, ಕಾಂಡಗಳು ಮತ್ತು ರೆಂಬೆಗಳ ಆಧಾರದ ಮೇಲೆ ಮೂಲಿಕೆಗಳು, ಪೊದೆಗಳು ಹಾಗೂ ಮರಗಳಾಗಿ ಗುಂಪು ಮಾಡುತ್ತೇವೆ ಎಂದು ತಿಳಿಯುವುದು. |
| | 2) ಸಸ್ಯದ ಭಾಗಗಳಾದ ಎಲೆ, ಬೇರು, ಕಾಂಡ, ಹೂ, ಕಾಯಿಗಳ ರಚನೆ ಮತ್ತು ಕಾರ್ಯಗಳ ಬಗ್ಗೆ ತಿಳಿಯುವುದು. |
| | 3) ಹಸಿರು ಸಸ್ಯಗಳು ದ್ಯುತಿ ಸಂಶ್ಲೇಷಣೆ ಕ್ರಿಯೆಯ ಮೂಲಕ ಆಹಾರ ತಯಾರಿಸುತ್ತವೆ ಎಂಬುದನ್ನು ಅರ್ಥೈಸಿಕೊಳ್ಳುವುದು. |
| | |

| ಕಲಿಕೆಯ ಅಂಶಗಳು | ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು | ಬೋಧನಾ– ಕಲಿಕೋಪಕರಣಗಳು | ಮೌಲ್ಯಮಾಪನ ಸಾಧನ–ತಂತ್ರಗಳು | ಶಿಕ್ಷಕರ ಸ್ವ– ಅವಲೋಕನ |
|---|---|---|---|---|
| **ತೊಡಗಿಸಿಕೊಳ್ಳುವಿಕೆ** | * ಮಕ್ಕಳಿಗೆ ಸಸ್ಯದ ಚಿತ್ರ ಬರೆದು ಭಾಗಗಳನ್ನು ಗುರುತಿಸಲು ಹೇಳುವುದು. | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ : ಚಿತ್ರ ರಚನೆ | * ಚಿತ್ರ ರಚನೆಯಲ್ಲಿ ಆಸಕ್ತಿ ತೋರುವರೇ? |
| **ಪತ್ತೆಹಚ್ಚುವಿಕೆ** | * ಸಸ್ಯದ ಬೆಳವಣಿಗೆಗೆ ಏನೇನು ಅವಶ್ಯಕ? ಎಂಬುದನ್ನು ಗುಂಪಿನಲ್ಲಿ ಚರ್ಚಿಸಿ ಪಟ್ಟಿ ಮಾಡಲು ತಿಳಿಸುವುದು. | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ : ಪಟ್ಟಿ ಮಾಡುವುದು | * ಚರ್ಚೆಯಲ್ಲಿ ಸಕ್ರೀಯವಾಗಿ ಪಾಲ್ಗೋಳ್ಳುವರೇ? |
| **ವಿವರಣೆ**<br><br>* ಗಿಡ ಮೂಲಿಕೆಗಳು, ಪೊದೆಗಳು ಮತ್ತು ಮರಗಳು :<br><br>* ಸಸ್ಯದ ಭಾಗಗಳು : | * ಸಸ್ಯಗಳ ಎತ್ತರ, ಕಾಂಡಗಳು ಮತ್ತು ರೆಂಬೆಗಳ ಆಧಾರದ ಮೇಲೆ ಸಸ್ಯಗಳನ್ನು ಗಿಡಮೂಲಿಕೆಗಳು, ಪೊದೆಗಳು, ಮರಗಳು, ನೆಲ ಬಳ್ಳಿಗಳು, ಅಡರು ಬಳ್ಳಿಗಳು ಎಂದು ವರ್ಗೀಕರಿಸಲಾಗಿದೆ ಎಂದು ಉದಾಹರಣೆಗಳ ಮೂಲಕ ವಿವರಿಸುವುದು<br><br>1) ಕಾಂಡ : ಕಾಂಡವು ಸಸ್ಯದ ಭಾಗವಾಗಿದ್ದು ಎಲೆ, ರೆಂಬೆ, ಹೂ ಮತ್ತು ಹಣ್ಣುಗಳನ್ನು ಹೊಂದಿರುತ್ತದೆ ಮತ್ತು ಇದು ಎಲೆಗಳಿಗೆ ಮತ್ತು ಸಸ್ಯದ ಇತರ ಭಾಗಗಳಿಗೆ ನೀರು ಮತ್ತು ಖನಿಜಗಳನ್ನು ಸಾಗಿಸುತ್ತದೆ ಎಂದು ತಿಳಿಸುವುದು. | ಸಸ್ಯಗಳು | ತಂತ್ರ : ವಿವರಣೆ<br>ಸಾಧನ : ಪ್ರಾತ್ಯಕ್ಷಿಕೆ | * ಸಸ್ಯಗಳ ವರ್ಗೀಕರಣವನ್ನು ತಿಳಿಯುವರೇ? |

| ವಿಷಯ : ವಿಜ್ಞಾನ | | ತರಗತಿ : 6 ನೇ ತರಗತಿ | | |
|---|---|---|---|---|
| **ಕಲಿಕೆಯ ಅಂಶಗಳು** | **ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು** | **ಬೋಧನಾ–ಕಲಿಕೋಪಕರಣಗಳು** | **ಮೌಲ್ಯಮಾಪನ ಸಾಧನ–ತಂತ್ರಗಳು** | **ಶಿಕ್ಷಕರ ಸ್ವ–ಅವಲೋಕನ** |
| * ಸಸ್ಯದ ಭಾಗಗಳು : | 2) ಎಲೆ : ಎಲೆಯ ಭಾಗಗಳ ಕುರಿತು ತಿಳಿಸುತ್ತಾ ಎಲೆಗಳು ಭಾಷ್ಪವಿಸರ್ಜನೆಯ ಮೂಲಕ ಹೆಚ್ಚಾದ ನೀರನ್ನು ಹೊರಹಾಕುತ್ತದೆ ಎಂಬುದನ್ನು ಪ್ರಯೋಗದ ಮೂಲಕ ವಿವರಿಸುವುದು.<br>3) ಬೇರು : ಬೇರುಗಳು ನೀರು ಮತ್ತು ಖನಿಜ ಅಂಶಗಳನ್ನು ಹೀರಿಕೊಂಡು ಸಸ್ಯದ ಭಾಗಗಳಿಗೆ ಸಾಗಿಸುತ್ತದೆ ಮತ್ತು ಸಸ್ಯವನ್ನು ಮಣ್ಣಿನಲ್ಲಿ ದೃಢವಾಗಿ ನಿಲ್ಲಿಸುತ್ತದೆ ಎಂದು ತಿಳಿಸುವದು.<br>4) ಹೂವು : ಮಾದರಿ ಹೂವಿನ ಸಹಾಯದಿಂದ ಪುಷ್ಪ ಪತ್ರಗಳು, ಪುಷ್ಪ ದಳಗಳು, ಕೇಸರಗಳು ಮತ್ತು ಶಲಾಕೆಗಳು ಹೂವಿನ ಭಾಗಗಳೆಂದು ತಿಳಿಸುವುದು. | ಸಸ್ಯಗಳು, ದಾಸವಾಳ ಹೂ | ತಂತ್ರ : ವಿವರಣೆ<br>ಸಾಧನ : ಪ್ರಾತ್ಯಕ್ಷಿಕೆ | * ಸಸ್ಯದ ಭಾಗಗಳ ಕಾರ್ಯಗಳನ್ನು ತಿಳಿಯುವರೇ?<br>* ಹೂವಿನ ರಚನೆ ಮತ್ತು ಕಾರ್ಯಗಳನ್ನು ತಿಳಿಯುವರೇ? |
| **ವಿಷಯದ ವಿಸ್ತರಣೆ** | * ಮಕ್ಕಳಿಗೆ 5 ಸಸ್ಯಗಳ ಎಲೆಗಳ ಮಾದರಿಗಳನ್ನು ಸಂಗ್ರಹಿಸಿ, ಅವುಗಳನ್ನು ಒಣಗಿಸಿ, ಪುಸ್ತಕದಲ್ಲಿ ಅಂಟಿಸಿ, ಅವುಗಳ ವಿನ್ಯಾಸವನ್ನು ಮತ್ತು ಸಸ್ಯದ ಹೆಸರನ್ನು ಬರೆಯಲು ತಿಳಿಸುವುದು. | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ : ಯೋಜನೆ | * ಯೋಜನೆ ತಯಾರಿಕೆಯಲ್ಲಿ ಆಸಕ್ತಿ ಹೊಂದಿರುವರೇ? |
| **ಮೌಲ್ಯಮಾಪನ** | * ಪಠ್ಯಪುಸ್ತಕದ ಪ್ರಶ್ನೆಗಳು ಮತ್ತು ಚಟುವಟಿಕೆಗಳನ್ನು ಮಾಡಿಸಿ, ಕಪ್ಪು ಹಲಗೆಯ ಮೇಲೆ ಮಕ್ಕಳಿಂದ ಮಾಡಿಸುವುದು ಮತ್ತು ಮಾರ್ಗದರ್ಶಿಸುವುದು. | ಪಠ್ಯಪುಸ್ತಕ | ತಂತ್ರ : ಮೌಲ್ಯಮಾಪನ<br>ಸಾಧನ : ಪ್ರಶ್ನೆಗಳು | * ಎಲ್ಲಾ ಪ್ರಶ್ನೆಗಳಿಗೆ ಸರಿಯಾದ ಉತ್ತರಗಳನ್ನು ನೀಡುವರೇ? |

**ವಿಷಯ ಶಿಕ್ಷಕರ ಸಹಿ** **ಮುಖ್ಯಗುರುಗಳ ಸಹಿ**

| ವಿಷಯ : ವಿಜ್ಞಾನ | ಪಾಠ ಯೋಜನೆ | ತರಗತಿ : 6 ನೇ ತರಗತಿ |
|---|---|---|
| ಘಟಕದ ಹೆಸರು : ದೇಹದ ಚಲನೆಗಳು | ದಿನಾಂಕ : ರಿಂದ ವರೆಗೆ | |

| ಸಾಮರ್ಥ್ಯಗಳು : | |
|---|---|
| | 1) ಮಾನವನ ದೇಹದ ಅಸ್ಥಿಪಂಜರವು ಮೂಳೆಗಳು, ಮೃದ್ವಸ್ಥಿಗಳಿಂದ ಆಗಿದೆ ಎಂದು ಮತ್ತು ಅದರ ಕಾರ್ಯಗಳನ್ನು ತಿಳಿಯುವುದು. |
| | 2) ಎರಡು ಗುಂಪಿಗಳ ಸ್ನಾಯುಗಳ ಪರ್ಯಾಯ ಸಂಕುಚನ ಮತ್ತು ವಿಕಸನದಿಂದ ಮೂಳೆಗಳು ಚಲಿಸುತ್ತವೆ ಎಂಬುದನ್ನು ಅರಿಯುವುದು. |
| | 3) ಕೀಲುಗಳ ಮತ್ತು ಅವುಗಳ ಚಲನೆಯ ಬಗ್ಗೆ ತಿಳಿಯುವುದು. |
| | 4) ಮೀನು, ಹಾವು, ಜಿರಳೆ, ಎರೆಹುಳು, ಬಸವನ ಹುಳು ಮುಂತಾದವುಗಳು ನಡೆಯಲು ಹಾಗೂ ಹಾರಲು ಸ್ನಾಯುಗಳು ಹಾಗೂ ಮೂಳೆಗಳು ಹೇಗೆ ಸಹಕರಿಸುತ್ತವೆ ಎಂಬುದನ್ನು ತಿಳಿಯುವುದು |

| ಕಲಿಕೆಯ ಅಂಶಗಳು | ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು | ಬೋಧನಾ-ಕಲಿಕೋಪಕರಣಗಳು | ಮೌಲ್ಯಮಾಪನ ಸಾಧನ-ತಂತ್ರಗಳು | ಶಿಕ್ಷಕರ ಸ್ವ-ಅವಲೋಕನ |
|---|---|---|---|---|
| **ತೊಡಗಿಸಿಕೊಳ್ಳುವಿಕೆ** | * ಮಕ್ಕಳಿಗೆ ಹಸು, ಎಮ್ಮೆ, ಮನುಷ್ಯ, ಹಾವು, ಮೀನು, ಪಕ್ಷಿಗಳು ಯಾವ ಅಂಗಗಳ ಮೂಲಕ ಚಲಿಸುತ್ತವೆ ಎಂಬುದನ್ನು ಗುರುತಿಸಿ ಹೆಸರಿಸಲು ತಿಳಿಸುವುದು. | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ :ಅವಲೋಕನ ಪಟ್ಟಿ | * ಚಟುವಟಿಕೆಯಲ್ಲಿ ಸಕ್ರೀಯವಾಗಿ ಪಾಲ್ಗೊಳ್ಳುವರೇ? |
| **ಪತ್ತೆಹಚ್ಚುವಿಕೆ** | * ಪ್ರಾಣಿಗಳು ಮತ್ತು ಮಾನವರಲ್ಲಿಯ ಚಲನಾಂಗಗಳ ರಚನೆಯನ್ನು ಗುರುತಿಸಿ, ವ್ಯತ್ಯಾಸ ತಿಳಿಸಲು ಹೇಳುವುದು. | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ : ವ್ಯತ್ಯಾಸ ಗುರುತಿಸುವುದು | * ಪೂರ್ವ ಜ್ಞಾನವನ್ನು ಸ್ಮರಿಸಿ ಉತ್ತರಿಸುವರೇ? |
| **ವಿವರಣೆ**<br>* ಮಾನವ ದೇಹದ ಚಲನೆಗಳು :<br><br>* ಮಾನವನ ಅಸ್ಥಿಪಂಜರ: | * ಮಾನವ ದೇಹದಲ್ಲಿನ ಚಲನೆಯ ಕುರಿತು ವಿವರಿಸುತ್ತಾ, ಗೋಲ ಮತ್ತು ಗುಳಿ ಕೀಲುಗಳು, ತಿರುಗಣಿ ಕೀಲು, ಬಿಜಾಗರಿ ಕೀಲುಗಳು, ಸ್ಥಿರ ಕೀಲುಗಳು ಚಲನೆಯಲ್ಲಿ ಹೇಗೆ ಕಾರ್ಯ ನಿರ್ವಹಿಸುತ್ತವೆ ಎಂದು ತಿಳಿಸುವುದು.<br><br>* ಮಾನವನ ಅಸ್ಥಿಪಂಜರವು ತಲೆಬುರುಡೆ, ಬೆನ್ನು ಮೂಳೆ, ಪಕ್ಕೆಲುಬು, ಎದೆಯ ಮೂಳೆ ಭುಜ ಮತ್ತು ಸೊಂಟದ ಮೂಳೆಗಳು, ಕೈ ಹಾಗೂ ಕಾಲಿನ ಮೂಳೆಗಳನ್ನು ಒಳಗೊಂಡಿರುತ್ತದೆ. | ಅಸ್ಥಿಪಂಜರದ ಮಾದರಿ | ತಂತ್ರ : ವಿವರಣೆ<br>ಸಾಧನ : ಪ್ರಾತ್ಯಕ್ಷಿಕೆ | * ಮಾನವನ ದೇಹದ ಚಲನೆಯ ಕೀಲುಗಳನ್ನು ತಿಳಿಯುವರೇ?<br><br>* ಮಾನವನ ಅಸ್ಥಿಪಂಜರದ ಬಗ್ಗೆ ತಿಳಿಯುವರೇ? |

| ವಿಷಯ : ವಿಜ್ಞಾನ | | ತರಗತಿ : 6 ನೇ ತರಗತಿ | | |
|---|---|---|---|---|
| **ಕಲಿಕೆಯ ಅಂಶಗಳು** | **ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು** | **ಬೋಧನಾ–ಕಲಿಕೋಪಕರಣಗಳು** | **ಮೌಲ್ಯಮಾಪನ ಸಾಧನ–ತಂತ್ರಗಳು** | **ಶಿಕ್ಷಕರ ಸ್ವ–ಅವಲೋಕನ** |
| * ಪ್ರಾಣಿಗಳಲ್ಲಿ ಚಲನೆ : | * ಪ್ರಾಣಿಗಳ ಚಲನೆಯ ಬಗ್ಗೆ ತಿಳಿಸುತ್ತಾ, ಮೀನು, ಹಾವು, ಜಿರಳೆ, ಎರೆಹುಳು, ಬಸವನ ಹುಳು ಮುಂತಾದ ಪ್ರಾಣಿಗಳ ಚಲನೆ ಮತ್ತು ಅವುಗಳ ದೇಹ ರಚನೆಗೆ ಅನುಗುಣವಾದ ಉದಾಹರಣೆಗಳೊಂದಿಗೆ ವಿವರಿಸುವುದು. | ಚಿತ್ರ ಪಟ | ತಂತ್ರ : ವಿವರಣೆ<br>ಸಾಧನ : ಪ್ರಾತ್ಯಕ್ಷಿಕೆ | * ವಿವಿಧ ಪ್ರಾಣಿಗಳ ಚಲನೆಯ ಬಗ್ಗೆ ತಿಳಿಯುವರೇ? |
| **ವಿಷಯದ ವಿಸ್ತರಣೆ** | * ಪಕ್ಷಗಳು ಹಾರಲು, ಪಕ್ಷಿಯ ದೇಹದ ರಚನೆಯು ಹೇಗೆ ಸಹಾಯಕವಾಗಿದೆ ಎಂಬುದನ್ನು ಗುಂಪಿನಲ್ಲಿ ಚರ್ಚಿಸಿ ಮಾಹಿತಿ ಸಂಗ್ರಹಿಸಲು ತಿಳಿಸುವುದು. | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ : ಚರ್ಚೆ | * ಚರ್ಚೆಯಲ್ಲಿ ಆಸಕ್ತಿ ಹೊಂದಿರುವರೇ? |
| **ಮೌಲ್ಯಮಾಪನ** | * ಪಠ್ಯಪುಸ್ತಕದ ಪ್ರಶ್ನೆಗಳು ಮತ್ತು ಚಟುವಟಿಕೆಗಳನ್ನು ಮಾಡಿಸಿ, ಕಪ್ಪು ಹಲಗೆಯ ಮೇಲೆ ಮಕ್ಕಳಿಂದ ಮಾಡಿಸುವುದು ಮತ್ತು ಮಾರ್ಗದರ್ಶಿಸುವುದು. | ಪಠ್ಯಪುಸ್ತಕ | ತಂತ್ರ : ಮೌಲ್ಯಮಾಪನ<br>ಸಾಧನ : ಪ್ರಶ್ನೆಗಳು | * ಎಲ್ಲಾ ಪ್ರಶ್ನೆಗಳಿಗೆ ಸರಿಯಾದ ಉತ್ತರಗಳನ್ನು ನೀಡುವರೇ? |

**ವಿಷಯ ಶಿಕ್ಷಕರ ಸಹಿ** **ಮುಖ್ಯಗುರುಗಳ ಸಹಿ**

| ವಿಷಯ : ವಿಜ್ಞಾನ | ಪಾಠ ಯೋಜನೆ | ತರಗತಿ : 6 ನೇ ತರಗತಿ |
|---|---|---|
| ಘಟಕದ ಹೆಸರು : ಜೀವಿಗಳು – ಅವುಗಳ ಲಕ್ಷಣಗಳು ಮತ್ತು ಆವಾಸಗಳು | ದಿನಾಂಕ : ರಿಂದ ವರೆಗೆ | |

| ಸಾಮರ್ಥ್ಯಗಳು : | |
|---|---|
| | 1) ಸಸ್ಯಗಳು ಮತ್ತು ಪ್ರಾಣಿಗಳು ವಾಸಿಸುವ ಸುತ್ತಲಿನ ಪರಿಸರವನ್ನು ಆವಾಸ ಎಂದು ಗುರುತಿಸುವರು. |
| | 2) ಆವಾಸದ ಎರಡು ವಿಧಗಳಾದ ಭೂ ಆವಾಸ ಮತ್ತು ಜಲ ಆವಾಸದ ಬಗ್ಗೆ ತಿಳಿಯುವರು. |
| | 3) ಸಸ್ಯ, ಪ್ರಾಣಿ ಮತ್ತು ಸೂಕ್ಷ್ಮ ಜೀವಿಗಳನ್ನು ಒಟ್ಟಾರೆ ಜೈವಿಕ ಘಟಕಗಳೆಂದು ತಿಳಿಯುವರು. |
| | 4) ಕಲ್ಲು, ಮಣ್ಣು, ಗಾಳಿ, ನೀರು, ಬೆಳಕು, ಉಷ್ಣತೆ ಮುಂತಾದವುಗಳನ್ನು ಅಜೈವಿಕ ಘಟಕಗಳೆಂದು ತಿಳಿಯುವರು. |
| | 5) ಜೀವಿಗಳ ಪ್ರಮುಖ ಲಕ್ಷಣಗಳಾದ ಪೋಷಣೇ, ಉಸಿರಾಟ, ವಿಸರ್ಜನೆ, ವಂಶಾಭಿವೃದ್ಧಿ, ಬೆಳವಣಿಗೆ, ಕಲನೆಯ ಕುರಿತು ತಿಳಿಯುವರು. |

| ಕಲಿಕೆಯ ಅಂಶಗಳು | ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು | ಬೋಧನಾ–ಕಲಿಕೋಪಕರಣಗಳು | ಮೌಲ್ಯಮಾಪನ ಸಾಧನ–ತಂತ್ರಗಳು | ಶಿಕ್ಷಕರ ಸ್ವ–ಅವಲೋಕನ |
|---|---|---|---|---|
| ತೊಡಗಿಸಿಕೊಳ್ಳುವಿಕೆ | * ಮಕ್ಕಳಿಗೆ ತಮ್ಮ ಸುತ್ತಲಿನ ಯಾವುದಾದರೂ 10 ಪ್ರಾಣಿ ಮತ್ತು 10 ಸಸ್ಯಗಳ ಹೆಸರುಗಳನ್ನು ಪಟ್ಟಿ ಮಾಡಲು ತಿಳಿಸುವುದು. | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ : ಪಟ್ಟಿ ಮಾಡುವುದು | * ಗುಂಪಿನಲ್ಲಿ ಎಲ್ಲರೂ ಭಾಗವಹಿಸಿ ಚರ್ಚಿಸುವರೇ? |
| ಪತ್ತೆಹಚ್ಚುವಿಕೆ | * ಮಕ್ಕಳಿಗೆ ಪ್ರಾಣಿಗಳಲ್ಲಿ ಮತ್ತು ಸಸ್ಯಗಳಲ್ಲಿರುವ ವ್ಯತ್ಯಾಸಗಳನ್ನು ಪಟ್ಟಿ ಮಾಡಲು ಹೇಳುವುದು. | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ : ವ್ಯತ್ಯಾಸ ಕಂಡುಹಿಡಿಯುವುದು | * ಪ್ರಾಣಿ ಮತ್ತು ಸಸ್ಯಗಳಲ್ಲಿರುವ ವ್ಯತ್ಯಾಸಗಳನ್ನು ಪಟ್ಟಿ ಮಾಡುವರೇ? |
| ವಿವರಣೆ<br>* ಆವಾಸ ಮತ್ತು ಹೊಂದಾಣಿಕೆ : | * ಚಟುವಟಿಕೆಗಳು ಮತ್ತು ಉದಾಹರಣೆಗಳ ಮೂಲಕ ಪ್ರಾಣಿಗಳೂ ಮತ್ತು ಸಸ್ಯಗಳು ವಾಸಿಸುವ ಸುತ್ತಲಿನ ಪರಿಸರವನ್ನು ಆವಾಸ ಎನ್ನುವರು. ಎಂದು ತಿಳಿಸುತ್ತಾ ಸಮುದ್ರ, ಮರುಭೂಮಿ, ಕಾಡು, ಸಹಿ ನೀರು ಮುಂತಾದ ಆವಾಸಗಳ ಕುರಿತು ವಿವರಿಸುತ್ತಾ, ಜೀವಿಗಳ ಬಗ್ಗೆ ಮಾಹಿತಿ ನೀಡುವುದು. ಯಾವುದೇ ಸಸ್ಯ ಅಥವಾ ಪ್ರಾಣಿ ತನ್ನ ಸುತ್ತಲಿನ ಪರಿಸರದಲ್ಲಿ ಸಹಜವಾಗಿ ಜೀವಿಸಲು ಸಹಾಯಕವಾದ ನಿರ್ದಿಷ್ಟ ಲಕ್ಷಣಗಳು ಅಥವಾ ಅಭ್ಯಾಸಗಳನ್ನು ಹೊಂದಾಣಿಕೆ ಎನ್ನವರು. ಎಂದು ತಿಳಿಸುತ್ತಾ ಜೀವಿಗಳ ಆವಾಸದ ಹೊಂದಾಣಿಕೆಯ ಬಗ್ಗೆ ತಿಳಿಸುವುದು. | ಚಿತ್ರಪಟ, ವಿಡಿಯೋ ಕ್ಲಿಪ್‌ಗಳು | ತಂತ್ರ : ಪ್ರಾತ್ಯಕ್ಷಿಕೆ ಮತ್ತು ವಿವರಣೆ<br>ಸಾಧನ : ಉದಾಹರಣೆಗಳು | * ಆವಾಸ ಮತ್ತು ಹೊಂದಾಣಿಕೆಯ ಬಗ್ಗೆ ತಿಳಿಯುವರೇ? |

| ವಿಷಯ : ವಿಜ್ಞಾನ | | ತರಗತಿ : 6 ನೇ ತರಗತಿ | | |
|---|---|---|---|---|
| **ಕಲಿಕೆಯ ಅಂಶಗಳು** | **ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು** | **ಬೋಧನಾ- ಕಲಿಕೋಪಕರಣಗಳು** | **ಮೌಲ್ಯಮಾಪನ ಸಾಧನ-ತಂತ್ರಗಳು** | **ಶಿಕ್ಷಕರ ಸ್ವ- ಅವಲೋಕನ** |
| * ಜೈವಿಕ ಮತ್ತು ಅಜೈವಿಕ ಘಟಕಗಳು :<br><br>* ಭೂ ಆವಾಸಗಳು ಮತ್ತು ಜಲ ಆವಾಸಗಳು :<br><br>* ಜೀವಿಗಳ ಲಕ್ಷಣಗಳು : | * ಉದಾಹರಣೆಗಳ ಮೂಲಕ ಆವಾಸದಲ್ಲಿನ ಜೈವಿಕ ಮತ್ತು ಅಜೈವಿಕ ಘಟಕಗಳನ್ನು ವಿವರವಾಗಿ ತಿಳಿಸುವುದು ಮತ್ತು ಜೈವಿಕ ಮತ್ತು ಅಜೈವಿಕ ಘಟಕಗಳ ನಡುವಿನ ಸಂಬಂಧವನ್ನು ವಿವರಿಸುವುದು.<br><br>* ಭೂ ಆವಾಸಗಳಲ್ಲಿ ಮರುಭೂಮಿ, ಪರ್ವತ ಪ್ರದೇಶ, ಹುಲ್ಲುಗಾವಲು, ಮತ್ತು ಜಲ ಆವಾಸಗಳಲ್ಲಿ ಸಾಗರ, ಕೆರೆಗಳು, ಸರೋವರಗಳಲ್ಲಿ ವಾಸಿಸುವ ಸಸ್ಯ ಮತ್ತು ಪ್ರಾಣಿಗಲ ದೇಹ ರಚನೆಯ ಕುರಿತು ವಿವರಿಸುವುದು.<br><br>* ಜೀವಿಗಳ ಲಕ್ಷಣಗಳಾದ ಪೋಷಣೆ, ಉಸಿರಾಟ, ಚಲನೆ, ವಿಸರ್ಜನೆ, ಪ್ರಚೋದನೆಗೆ ತಕ್ಕ ಪ್ರತಿಕ್ರಿಯೆ, ಬೆಳವಣಿಗೆ, ಸಂತಾನೋತ್ಪತ್ತಿ ಇವುಗಳ ಬಗ್ಗೆ ಉದಾಹರಣೆಗಳ ಬಗ್ಗೆ ವಿವರವಾಗಿ ತಿಳಿಸುವುದು.. | ಚಿತ್ರಪಟ, ವಿಡಿಯೋ ಕ್ಲಿಪ್‌ಗಳು | ತಂತ್ರ : ಪ್ರಾತ್ಯಕ್ಷಿಕೆ ಮತ್ತು ವಿವರಣೆ<br>ಸಾಧನ : ಉದಾಹರಣೆಗಳು | * ಆವಾಸದಲ್ಲಿನ ಜೈವಿಕ ಮತ್ತು ಅಜೈವಿಕ ಘಟಕಗಳನ್ನು ಗುರುತಿಸುವರೇ?<br><br>* ಭೂ ಆವಾಸ ಮತ್ತು ಜಲ ಆವಾಸದ ಬಗ್ಗೆ ತಿಳಿಯುವರೇ?<br><br>* ಜೀವಿಗಳ ಲಕ್ಷಣಗಳನ್ನು ಗುರುತಿಸುವರೇ? |
| **ವಿಷಯದ ವಿಸ್ತರಣೆ** | * ಮಕ್ಕಳ ವಿವಿಧ ಆವಾಸಗಳಲ್ಲಿನ ಪ್ರಾಣಿಗಳು ಮತ್ತು ಸಸ್ಯಗಳ ಚಿತ್ರಗಳನ್ನು ಸಂಗ್ರಹಿಸಿ ಚಿತ್ರ ಸಂಪುಟ ತಯಾರಿಸಲು ಹೇಳುವುದು. | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ : ಚಿತ್ರ ಸಂಪುಟ ತಯಾರಿಕೆ | * ಚಿತ್ರ ಸಂಪುಟ ತಯಾರಿಸುವರೇ? |
| **ಮೌಲ್ಯಮಾಪನ** | * ಪಠ್ಯಪುಸ್ತಕದ ಪ್ರಶ್ನೆಗಳು ಮತ್ತು ಚಟುವಟಿಕೆಗಳನ್ನು ಮಾಡಿಸಿ, ಕಪ್ಪು ಹಲಗೆಯ ಮೇಲೆ ಮಕ್ಕಳಿಂದ ಮಾಡಿಸುವುದು ಮತ್ತು ಮಾರ್ಗದರ್ಶಿಸುವುದು. | ಪಠ್ಯಪುಸ್ತಕ | ತಂತ್ರ : ಮೌಲ್ಯಮಾಪನ<br>ಸಾಧನ : ಪ್ರಶ್ನೆಗಳು | * ಎಲ್ಲಾ ಪ್ರಶ್ನೆಗಳಿಗೆ ಸರಿಯಾದ ಉತ್ತರಗಳನ್ನು ನೀಡುವರೇ? |

**ವಿಷಯ ಶಿಕ್ಷಕರ ಸಹಿ** **ಮುಖ್ಯಗುರುಗಳ ಸಹಿ**

| ವಿಷಯ : ವಿಜ್ಞಾನ | ಪಾಠ ಯೋಜನೆ | ತರಗತಿ : 6 ನೇ ತರಗತಿ |
|---|---|---|
| ಘಟಕದ ಹೆಸರು : ಚಲನೆ ಮತ್ತು ದೂರದ ಅಳತೆ | ದಿನಾಂಕ : ರಿಂದ ವರೆಗೆ | |

| ಸಾಮರ್ಥ್ಯಗಳು : | |
|---|---|
| | 1) ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಚಲಿಸಲು ಸಾರಿಗೆಯ ವಿವಿಧ ಪ್ರಾಕಾರಗಳನ್ನು ಬಳಸುತ್ತೇವೆ ಎಂದು ತಿಳಿಸುವುದು. |
| | 2) ಉದ್ದದ ಅನೌಪಚಾರಿಕ ಮಾನಗಳಾದ ಗೇಣು, ಮಾರು ಮುಂತಾದವುಗಳ ಬಗ್ಗೆ ತಿಳಸುವುದು. |
| | 3) ಉದ್ದದ ಅಂತರಾಷ್ಟ್ರೀಯ ಏಕಮಾನ ಪದ್ಧತಿಯ ಬಗ್ಗೆ ವಿವರಿಸುವುದು. |
| | 4) ವಕ್ರ ರೇಖೆಯ ಉದ್ದವನ್ನು ಅಳೆಯುವ ವಿಧಾನ ತಿಳಿಸುವುದು. |
| | 5) ಚಲನೆಯ ವಿಧಗಳಾದ ಸರಳ ರೇಖೀಯ ಚಲನೆ, ವೃತ್ತೀಯ ಚಲನೆ ಹಾಗೂ ಆವರ್ತಕ ಚಲನೆಯ ಬಗ್ಗೆ ತಿಳಿಸುವುದು. |

| ಕಲಿಕೆಯ ಅಂಶಗಳು | ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು | ಬೋಧನಾ–ಕಲಿಕೋಪಕರಣಗಳು | ಮೌಲ್ಯಮಾಪನ ಸಾಧನ–ತಂತ್ರಗಳು | ಶಿಕ್ಷಕರ ಸ್ವ–ಅವಲೋಕನ |
|---|---|---|---|---|
| **ತೊಡಗಿಸಿಕೊಳ್ಳುವಿಕೆ** | * ಮಕ್ಕಳಿಗೆ ಸಾರಿಗೆ ಸಾಧನಗಳನ್ನು ಪಟ್ಟಿ ಮಾಡಲು ತಿಳಿಸಿ, ಅವುಗಳನ್ನು ಭೂ ಸಾರಿಗೆ, ವಾಯು ಸಾರಿಗೆ ಮತ್ತು ಜಲ ಸಾರೆಗೆ ಸಾಧನಗಳಾಗಿ ವರ್ಗೀಕರಿಸಲು ತಿಳಿಸುವುದು. | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ : ಪಟ್ಟಿ ಮಾಡುವುದು | * ಸಾರಿಗೆಯ ಸಾಧನಗಳನ್ನು ಗುರುತಿಸುವರೇ? |
| **ಪತ್ತೆಹಚ್ಚುವಿಕೆ** | * ಮಕ್ಕಳಿಗೆ ಮನೆಯಿಂಧ ಶಾಲೆಗೆ ಇರುವ ದೂರವನ್ನು ತಿಳಿಸಲು ಹೇಳಿ, ಅದನ್ನು ಭೇರೆ ಏಕಮಾನ ಮತ್ತು ಅನೌಪಚಾರಿಕ ಮಾನಗಳಲ್ಲಿ ವ್ಯಕ್ತಪಡಿಸಲು ತಿಳಿಸುವುದು. | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ : ಗುಂಪು ಕಾರ್ಯ | * ದೂರವನ್ನು ಅಂದಾಜಿಸಿ ತಿಳಿಸುವುರೇ? |
| **ವಿವರಣೆ**<br><br>* ಸಾರಿಗೆ ಮತ್ತು ಸಾರಿಗೆಯ ಸಾಧನಗಳು :<br><br>* ದೂರ ಮತ್ತು ಅಳತೆಗಳು ಹಾಗೂ ಅನೌಪಚಾರಿಕ ಮಾನಗಳು | * ಸಾರಿಗೆಯ ಕುರಿತು ವಿವರಿಸುತ್ತಾ ಸಾರಿಗೆಯ ಪರಿಚಯಾತ್ಮಕ ಕಥೆಯನ್ನು ಹೇಳುವುದು ಮತ್ತು ಸಾರಿಗೆಯ ಪ್ರಾಚೀನ ಮತ್ತು ಆಧುನಿಕ ಸಾಧನಗಳನ್ನು ಚಿತ್ರಪಟ ಹಾಗೂ ಉದಾಹರಣೆಗಳ ಮೂಲಕ ವಿವರಿಸುವುದು.<br><br>* ಎರಡು ಸ್ಥಳಗಳು ಅಥವಾ ಎರಡು ವತುಗಳ ನಡುವಿನ ಅಂತರವನ್ನು ದೂರ ಎನ್ನುವರು ಎಂದು ತಿಳಿಸುತ್ತಾ, ದೂರದ ಅಳತೆ ಮಾಡುವ ಅನೌಪಚಾರಿಕ ಮಾನಗಳಾದ ಅಂಗುಲ, ಗೇಣು, ಮೊಳ ಮಾರು ಇವುಗಳ ಬಗ್ಗೆ ವಿವರಿಸುವುದು. | ಚಿತ್ರಪಟ, ವಸ್ತುಗಳು | ತಂತ್ರ : ವಿವರಣೆ<br>ಸಾಧನ : ಉದಾಹರಣೆಗಳು | * ಸಾರಿಗೆ ಸಾಧನಗಳ ಮಹತ್ವ ತಿಳಿಯುವರೇ?<br><br>* ದೂರದ ಅನೌಪಚಾರಿಕ ಮಾನಗಳ ಬಗ್ಗೆ ವಿವರಿಸುವರೇ? |

| ವಿಷಯ : ವಿಜ್ಞಾನ | | ತರಗತಿ : 6 ನೇ ತರಗತಿ | | |
|---|---|---|---|---|
| **ಕಲಿಕೆಯ ಅಂಶಗಳು** | **ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು** | **ಬೋಧನಾ–ಕಲಿಕೋಪಕರಣಗಳು** | **ಮೌಲ್ಯಮಾಪನ ಸಾಧನ–ತಂತ್ರಗಳು** | **ಶಿಕ್ಷಕರ ಸ್ವ–ಅವಲೋಕನ** |
| * ಉದ್ದದ ಅಳತೆಯ ಆದರ್ಶ ಏಕಮಾನಗಳು :<br><br>* ವಕ್ರ ರೇಖೆಯ ಉದ್ದವನ್ನು ಅಳೆಯುವುದು :<br><br>* ಚಲನೆಯ ವಿಧಗಳು : | * ಉದಾಹರಣೆಗಳ ಮೂಲಕ ದೂರದ ಅಳತೆಯ ಆದರ್ಶ ಮಾನಗಳಾದ ಅಡಿ, ಸೆಂಟಿ ಮೀಟರ್, ಮೀಟರ್, ಮತ್ತು ಕಿಲೋ ಮೀಟರ್ ಬಗ್ಗೆ ವಿವರಿಸುವುದು. ಉದ್ದ ಅಂತರಾಷ್ಟ್ರೀಯ ಏಕಮಾನ ಮೀಟರ್ ಎಂದು ತಿಳಿಸುವುದು.<br><br>* ಉದಾಹರಣೆಯ ಮೂಲಕ ದಾರದ ಸಹಾಯದಿಂದ ವಕ್ರ ರೇಖೆಯ ಉದ್ದವನ್ನು ಅಳೇಯುವ ವಿಧಾನವನ್ನು ಹಂತ ಹಂತವಾಗಿ ವಿವರಿಸುವುದು.<br><br>* ನಮ್ಮ ಸುತ್ತಲೂ ಇರುವ ಚಲಿಸುತ್ತಿರುವ ವಸ್ತುಗಳ ಕುರಿತು ತಿಳಿಸುತ್ತಾ, ಚಲನೆಯ ವಿಧಗಳಾದ ಸರಳ ರೇಖೀಯ ಚಲನೆ, ವೃತ್ತೀಯ ಚಲನೆ ಹಾಗೂ ಆವರ್ತಕ ಚಲನೆಯ ಬಗ್ಗೆ ಉದಾಹರಣೆಗಳ ಮೂಲಕ ವಿವರಿಸುವುದು. | ಚಿತ್ರಪಟ, ಟೇಪ್, ಸ್ಕೇಲ್, ದಾರ ಮೀಟರ್ ಪಟ್ಟಿ | ತಂತ್ರ : ಪ್ರಾತ್ಯಕ್ಷಿಕೆ ಮತ್ತು ವಿವರಣೆ<br>ಸಾಧನ : ಉದಾಹರಣೆಗಳು | * ದೂರದ ಆದರ್ಶ ಏಕಮಾನಗಳನ್ನು ಗುರುತಿಸುವರೇ?<br><br>* ವಕ್ರ ರೇಖೆಯ ಉದ್ದವನ್ನು ಅಳೆಯುವರೇ?<br><br>* ಚಲನೆಯ ವಿಧಗಳನ್ನು ತಿಳಿಯುವರೇ? |
| **ವಿಷಯದ ವಿಸ್ತರಣೆ** | * ಮಕ್ಕಳ ಗುಂಪುಗಳಿಗೆ ಸದಸ್ಯರ ಎತ್ತರಗಳನ್ನು ಅಳೆದು ಸ್ತಂಭ ನಕ್ಷೆಯಲ್ಲಿ ಪ್ರತಿನಿಧಿಸಲು ತಿಳಿಸುವುದು. | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ : ಯೋಜನಾ ಕಾರ್ಯ | * ಯೋಜನಾ ಕಾರ್ಯವು ಪಠ್ಯ ವಿಷಯಕ್ಕೆ ಪೂರಕವಾಗಿದೆಯೇ? |
| **ಮೌಲ್ಯಮಾಪನ** | * ಪಠ್ಯಪುಸ್ತಕದ ಪ್ರಶ್ನೆಗಳು ಮತ್ತು ಚಟುವಟಿಕೆಗಳನ್ನು ಮಾಡಿಸಿ, ಕಪ್ಪು ಹಲಗೆಯ ಮೇಲೆ ಮಕ್ಕಳಿಂದ ಮಾಡಿಸುವುದು ಮತ್ತು ಮಾರ್ಗದರ್ಶಿಸುವುದು. | ಪಠ್ಯಪುಸ್ತಕ | ತಂತ್ರ : ಮೌಲ್ಯಮಾಪನ<br>ಸಾಧನ : ಪ್ರಶ್ನೆಗಳು | * ಎಲ್ಲಾ ಪ್ರಶ್ನೆಗಳಿಗೆ ಸರಿಯಾದ ಉತ್ತರಗಳನ್ನು ನೀಡುವರೇ? |

**ವಿಷಯ ಶಿಕ್ಷಕರ ಸಹಿ** **ಮುಖ್ಯಗುರುಗಳ ಸಹಿ**

| ವಿಷಯ : ವಿಜ್ಞಾನ | ಪಾಠ ಯೋಜನೆ | ತರಗತಿ : 6 ನೇ ತರಗತಿ |
|---|---|---|
| ಘಟಕದ ಹೆಸರು : ಬೆಳಕು, ಛಾಯೆಗಳು ಮತ್ತು ಪ್ರತಿಫಲನಗಳು | ದಿನಾಂಕ : ರಿಂದ ವರೆಗೆ | |

| | |
|---|---|
| **ಸಾಮರ್ಥ್ಯಗಳು :** | 1) ಬೆಳಕಿನ ಅರ್ಥವನ್ನು ತಿಳಿಸಿ, ಸ್ವಯಂ ಪ್ರಕಾಶಿತ ಮತ್ತು ಸ್ವಯಂ ಪ್ರಕಾಶಿತವಲ್ಲದ ವಸ್ತುಗಳ ಬಗ್ಗೆ ತಿಳಿಸುವುದು. |
| | 2) ಪಾರದರ್ಶಕ, ಅಪಾರದರ್ಶಕ ಮತ್ತು ಅರೆ ಪಾರದರ್ಶಕ ವಸ್ತುಗಳ ಬಗ್ಗೆ ತಿಳಿಸುವುದು. |
| | 3) ಛಾಯೆ ಉಂಟಾಗಲು ಬೇಕಾಗುವ ನಿಯಮಗಳನ್ನು ತಿಳಿಸುವುದು. |
| | 4) ಬೆಳಕು ಸರಳ ರೇಖೆಯಲ್ಲಿ ಚಲಿಸುತ್ತದೆ ಎಂದು ತಿಳಿಸುವುದು. |
| | 5) ದರ್ಪಣ ಮತ್ತು ಪ್ರತಿಬಿಂಬಗಳ ಬಗ್ಗೆ ತಿಳಿಸುವುದು. |

| ಕಲಿಕೆಯ ಅಂಶಗಳು | ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು | ಬೋಧನಾ–ಕಲಿಕೋಪಕರಣಗಳು | ಮೌಲ್ಯಮಾಪನ ಸಾಧನ–ತಂತ್ರಗಳು | ಶಿಕ್ಷಕರ ಸ್ವ–ಅವಲೋಕನ |
|---|---|---|---|---|
| **ತೊಡಗಿಸಿಕೊಳ್ಳುವಿಕೆ** | * ಮಕ್ಕಳಿಗೆ ಸ್ವಯಂ ಪ್ರಕಾಶಿತ ಮತ್ತು ಸ್ವಯಂ ಪ್ರಕಾಶಿತವಲ್ಲದ ವಸ್ತುಗಳನ್ನು ಪಟ್ಟಿ ಮಾಡಲು ತಿಳಿಸುವುದು. | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ : ಪಟ್ಟಿ ಮಾಡುವುದು | * ಪೂರ್ವ ಜ್ಞಾನದಿಂದ ಚಟುವಟಿಕೆಯನ್ನು ಮಾಡುವರೇ? |
| **ಪತ್ತೆಹಚ್ಚುವಿಕೆ** | * ಮಕ್ಕಳಿಗೆ ತಮ್ಮ ನೆರಳಿನ ಉದ್ದವನ್ನು ಮುಂಜಾನೆ, ಮಧ್ಯಾಹ್ನ ಮತ್ತು ಸಾಯಮಕಾಲ ಅವಧಿಗಳಲ್ಲಿ ಲೆಕ್ಕಾಚಾರ ಮಾಡಿ ಮಾಹಿತಿ ಸಂಗ್ರಹಿಸಲು ತಿಳಿಸುವುದು. | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ : ಗುಂಪು ಕಾರ್ಯ | * ನಿಯೋಜಿತ ಕಾರ್ಯದಲ್ಲಿ ಆಸಕ್ತಿ ಹೊಂದಿರುವರೇ? |
| **ವಿವರಣೆ**<br><br>* ಪಾರದರ್ಶಕ, ಅಪಾರದರ್ಶಕ ಮತ್ತು ಅರೆ ಪಾರದರ್ಶಕ ವಸ್ತುಗಳು :<br><br>* ಛಾಯೆ ಉಂಟಾಗುವಿಕೆ : | * ಪಾರದರ್ಶಕ ವಸ್ತುಗಳು ತಮ್ಮ ಮೂಲಕ ಬೇಳಕನ್ನು ಹರಿಯಲು ಬಿಡುತ್ತವೆ. ಅಪಾರದರ್ಶಕ ವಸ್ತುಗಳು ತಮ್ಮ ಮೂಲಕ ಬೆಳಕನ್ನು ಹರಿಯಲು ಬಿಡಲಾರವು. ಅರೆಪಾರದರ್ಶಕ ವಸ್ತುಗಳು ತಮ್ಮ ಮೂಲಕ ಸ್ವಲ್ಪ ಪ್ರಮಾಣದಲ್ಲಿ ಅಂದರೆ ಭಾಗಶಃ ಬೆಳಕನ್ನು ಬಿಡುತ್ತವೆ ಎಂದು ಉದಾಹರಣೆಗಳ ಮೂಲಕ ವಿವರಿಸುವುದು.<br><br>* ಬೆಳಕಿನ ಪಥದಲ್ಲಿ ಅಪಾರದರ್ಶಕ ವಸ್ತುಗಳು ಬಮದಾಗ ಛಾಯೆ ಉಂಟಾಗುತ್ತದೆ ಎಂದು ಪ್ರಯೋಗಿಕ ಚಟುವಟಿಕೆಯ ಮೂಲಕ ವಿವರಿಸುವುದು. | ಗಾಜು, ಕಲ್ಲು, ನೀರು, ಮರದ ಹಲಗೆ, ಟಾರ್ಚ್, ಮೇಣದ ಬತ್ತಿ, ಕನ್ನಡಿ | ತಂತ್ರ : ವಿವರಣೆ<br>ಸಾಧನ : ಉದಾಹರಣೆಗಳು | * ಪಾರದರ್ಶಕ, ಅಪಾರದರ್ಶಕ ಮತ್ತು ಅರೆ ಪಾರದರ್ಶಕ ವಸ್ತುಗಳನ್ನು ಗುರುತಿಸುವರೇ? |

| ವಿಷಯ : ವಿಜ್ಞಾನ | | ತರಗತಿ : 6 ನೇ ತರಗತಿ | | |
|---|---|---|---|---|
| **ಕಲಿಕೆಯ ಅಂಶಗಳು** | **ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು** | **ಬೋಧನಾ– ಕಲಿಕೋಪಕರಣಗಳು** | **ಮೌಲ್ಯಮಾಪನ ಸಾಧನ–ತಂತ್ರಗಳು** | **ಶಿಕ್ಷಕರ ಸ್ವ– ಅವಲೋಕನ** |
| * ಸೂಜಿ ರಂಧ್ರ ಕ್ಯಾಮೆರಾ :<br><br>* ಬೆಳಕು ಸರಳ ರೇಖೆಯಲ್ಲಿ ಚಲಿಸುತ್ತದೆ : | * ಸೂಜಿ ರಂಧ್ರ ಕ್ಯಾಮೆರಾವನ್ನು ಸರಲ ವಸ್ತುವಿನಿಂದ ಮಾಡಬಹುದು ಮತ್ತು ಸೂರ್ಯನ ಹಾಗೂ ಪ್ರಕಾಶಿತ ವಸ್ತುಗಳು ಬಿಂಬವನ್ನು ಪಡೆಯಲು ಬಳಸಬಹುದು ಎಂದು ವಿವರಿಸುವುದು ಮತ್ತು ಒಂದು ಮಾದರಿ ಸೂಜಿ ರಂಧ್ರ ಕ್ಯಾಮೆರಾ ತಯಾರಿಸುವುದು.<br><br>* ಪ್ರಯೋಗದ ಮೂಲಕ ಬೆಳಕು ಸರಳ ರೇಖೆಯಲ್ಲಿ ಚಲಿಸುತ್ತದೆ ಎಂಬುದನ್ನು ವಿವರಿಸುವುದು. ಹಾಗೂ ದರ್ಪಣಗಳು ಸ್ಪಷ್ಟ ಪ್ರತಿಬಿಂಬವನ್ನು ನೀಡುತ್ತವೆ ಎಂದು ಉದಾಹರಣೆಗಳ ಮೂಲಕ ವಿವರಿಸುವುದು. | ರಟ್ಟಿ ಡಬ್ಬಿಗಳು, ಮೇಣದ ಬತ್ತಿ, ಕೊಳವೆಗಳು, ರಟ್ಟುಗಳು | ತಂತ್ರ : ಪ್ರಾತ್ಯಕ್ಷಿಕೆ ಮತ್ತು ವಿವರಣೆ<br>ಸಾಧನ : ಉದಾಹರಣೆಗಳು | * ಸೂಜಿ ರಂಧ್ರ ಕ್ಯಾಮೆರಾ ಕಾರ್ಯ ವಿಧಾನ ತಿಳಿಯುವರೇ?<br><br>* ಬೆಳಕಿನ ಚಲನೆಯನ್ನು ತಿಳಿಯುವ ಮಾದರಿಯನ್ನು ತಯಾರಿಸುವರೇ? |
| **ವಿಷಯದ ವಿಸ್ತರಣೆ** | * ಮಕ್ಕಳ ಗುಂಪುಗಳಿಗೆ ಸೂಜಿರಂಧ್ರ ಕ್ಯಾಮರಾವನ್ನು ರಟ್ಟಿನ ಬಾಕ್ಸ್‌ನಿಂದ ತಯಾರಿಸಲು ತಿಳಿಸುವುದು. | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ : ಮಾದರಿ ತಯಾರಿಕೆ | * ಮಾದರಿ ತಯಾರಿಕೆಯಲ್ಲಿ ಆಸಕ್ತಿ ಹೊಂದಿರುವರೇ? |
| **ಮೌಲ್ಯಮಾಪನ** | * ಪಠ್ಯಪುಸ್ತಕದ ಪ್ರಶ್ನೆಗಳು ಮತ್ತು ಚಟುವಟಿಕೆಗಳನ್ನು ಮಾಡಿಸಿ, ಕಪ್ಪು ಹಲಗೆಯ ಮೇಲೆ ಮಕ್ಕಳಿಂದ ಮಾಡಿಸುವುದು ಮತ್ತು ಮಾರ್ಗದರ್ಶಿಸುವುದು. | ಪಠ್ಯಪುಸ್ತಕ | ತಂತ್ರ : ಮೌಲ್ಯಮಾಪನ<br>ಸಾಧನ : ಪ್ರಶ್ನೆಗಳು | * ಎಲ್ಲಾ ಪ್ರಶ್ನೆಗಳಿಗೆ ಸರಿಯಾದ ಉತ್ತರಗಳನ್ನು ನೀಡುವರೇ? |

**ವಿಷಯ ಶಿಕ್ಷಕರ ಸಹಿ**          **ಮುಖ್ಯಗುರುಗಳ ಸಹಿ**

| ವಿಷಯ : ವಿಜ್ಞಾನ | ಪಾಠ ಯೋಜನೆ | ತರಗತಿ : 6 ನೇ ತರಗತಿ |
|---|---|---|
| ಘಟಕದ ಹೆಸರು : ವಿದ್ಯುಚ್ಛಕ್ತಿ ಮತ್ತು ಮಂಡಲಗಳು | ದಿನಾಂಕ : ರಿಂದ ವರೆಗೆ | |

| | |
|---|---|
| ಸಾಮರ್ಥ್ಯಗಳು : | 1) ವಿದ್ಯುತ್ ಕೋಶದ ರಚನೆ ಮತ್ತು ಕಾರ್ಯ ವಿಧಾನದ ಬಗ್ಗೆ ತಿಳಿಸುವುದು. |
| | 2) ಬಲ್ಬನ್ ರಚನೆ ಮತ್ತು ಕಾರ್ಯ ವಿಧಾನದ ಬಗ್ಗೆ ತಿಳಿಸುವುದು. |
| | 3) ವಿದ್ಯುತ್ ಮಂಡಲಗಳ ರಚನೆ ಮತ್ತು ಕಾರ್ಯ ವಿಧಾನದ ಬಗ್ಗೆ ತಿಳಿಸುವುದು. |
| | 4) ವಿದ್ಯುತ್ ಮಂಡಲ ಪೂರ್ಣಗೊಳಿಸಲು ಅಥವಾ ಕಡಿತಗೊಳಿಸಲು ಬಳಸುವ ಸಾಧನವೇ ಸ್ವಿಚ್ ಎಂಬುದನ್ನು ಅರ್ಥೈಸುವುದು. |
| | 5) ವಾಹಕಗಳು ಮತ್ತು ಅವಾಹಕಗಳು ಇವುಗಳ ಅರ್ಥ ತಿಳಿದು ಅವುಗಳನ್ನು ಗುರುತಿಸುವುದು. |

| ಕಲಿಕೆಯ ಅಂಶಗಳು | ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು | ಬೋಧನಾ–ಕಲಿಕೋಪಕರಣಗಳು | ಮೌಲ್ಯಮಾಪನ ಸಾಧನ–ತಂತ್ರಗಳು | ಶಿಕ್ಷಕರ ಸ್ವ–ಅವಲೋಕನ |
|---|---|---|---|---|
| **ತೊಡಗಿಸಿಕೊಳ್ಳುವಿಕೆ** | * ಮಕ್ಕಳಿಗೆ ವಿದ್ಯುತ್ ಶಕ್ತಿಯಿಂದ ಕಾರ್ಯ ನಿರ್ವಹಿಸುವ ಸಾಧನಗಳನ್ನು ಪಟ್ಟಿ ಮಾಡಲು ತಿಳಿಸುವುದು. | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ : ಪಟ್ಟಿ ಮಾಡುವುದು | * ಪೂರ್ವ ಜ್ಞಾನದಿಂದ ಚಟುವಟಿಕೆಯನ್ನು ಮಾಡುವರೇ? |
| **ಪತ್ತೆಹಚ್ಚುವಿಕೆ** | * ಮಕ್ಕಳಿಗೆ ರೇಡಿಯೋ, ಮೊಬೈಲ್ ಮತ್ತು ಗಡಿಯಾರಗಳು ಕಾರ್ಯ ನಿರ್ವಹಿಸುವ ವಿಧಾನವನ್ನು ವಿವರಿಸಲು ತಿಳಿಸುವುದು. | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ : ಗುಂಪು ಕಾರ್ಯ | * ನಿಯೋಜಿತ ಕಾರ್ಯದಲ್ಲಿ ಆಸಕ್ತಿ ಹೊಂದಿರುವರೇ? |
| **ವಿವರಣೆ**<br>* ವಿದ್ಯುತ್ ಕೋಶ :<br>* ವಿದ್ಯುತ್ ಬಲ್ಬ್ : | * ವಿದ್ಯುತ್ ಕೋಶದ ಮಾದರಿಯ ಸಹಾಯದಿಂದ ವಿದ್ಯುತ್ ಕೋಶವು ವಿದ್ಯುತ್ ಶಕ್ತಿಯ ಒಂದು ಆಕರವಾಗಿದೆ. ಎಂದು ತಿಳಿಸುತ್ತಾ, ಕೋಶವು ಎರಡು ಅಗ್ರಗಳನ್ನು ಹೊಂದಿದ್ದು ಧನಾಗ್ರ ಮತ್ತು ಋಣಾಗ್ರಗಳನ್ನು ಪರಿಚಯಿಸುವ ಮೂಲಕ ಶುಷ್ಕ ಕೋಶದ ಮಾದರಿಯನ್ನು ಪ್ರದರ್ಶಿಸುವುದು.<br><br>* ವಿದ್ಯುತ್ ಬಲ್ಬ್ ಅನ್ನು ವಿದ್ಯುತ್ ಕೋಶಕ್ಕೆ ಜೋಡಿಸಿ, ವಿದ್ಯುತ್ ಬಲ್ಬ್ ತಂತುವನ್ನು ಹೊಂದಿದ್ದು, ವಿದ್ಯುತ್ ಪ್ರವಾಹವು ಪ್ರವಹಿಸಿದಾಗ ಅದು ಬೆಳಗುತ್ತದೆ ಎಂದು ಪ್ರಯೋಗಿಕವಾಗಿ ವಿವರಿಸುವುದು. | ಶುಷ್ಕ ಕೋಶ ಮತ್ತು ಬಲ್ಬ್‌ಗಳು | ತಂತ್ರ : ವಿವರಣೆ<br>ಸಾಧನ :<br>ಉದಾಹರಣೆಗಳು, ಪ್ರಯೋಗಗಳು | * ವಿದ್ಯುತ್ ಕೋಶದ ಬಗ್ಗೆ ತಿಳಿಯುವರೇ?<br><br>* ಬಲ್ಬ್‌ನ ಕಾರ್ಯ ವಿಧಾನವನ್ನು ತಿಳಿಯುವರೇ? |

| ವಿಷಯ : ವಿಜ್ಞಾನ | | ತರಗತಿ : 6 ನೇ ತರಗತಿ | | |
|---|---|---|---|---|
| **ಕಲಿಕೆಯ ಅಂಶಗಳು** | **ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು** | **ಬೋಧನಾ–ಕಲಿಕೋಪಕರಣಗಳು** | **ಮೌಲ್ಯಮಾಪನ ಸಾಧನ–ತಂತ್ರಗಳು** | **ಶಿಕ್ಷಕರ ಸ್ವ–ಅವಲೋಕನ** |
| * ವಿದ್ಯುತ್ ಮಂಡಲ :<br><br>* ವಾಹಕ ಮತ್ತು ಅವಾಹಕಗಳು : | * ಮಾದರಿ ವಿದ್ಯುತ್ ಮಂಡಲದ ಸಹಾಯದಿಂದ ವಿದ್ಯುತ್ ಕೋಶದ ಎರಡು ಅಗ್ರಗಳನ್ನು ವಿದ್ಯುತ್ ಬಲ್ಬ್‌ನ ಎರಡು ಅಗ್ರಗಳಿಗೆ ಜೋಡಿಸಿದಾಗ, ವಿದ್ಯುತ್ ಮಂಡಲದಲ್ಲಿ ವಿದ್ಯುತ್ ಪ್ರವಾಹ ವಿದ್ದಾಗ ಮಾತ್ರ ವಿದ್ಯುತ್ ಬಲ್ಬ್ ಬೆಳಗುತ್ತದೆ ಎಂಬುದನ್ನು ವಿವರಿಸುವುದು. ಸ್ವಿಚ್ ವಿದ್ಯುತ್ ಮಂಢಲದ ವಿದ್ಯುತ್ ಪ್ರವಾಹವನ್ನು ನಿಯಂತ್ರಿಸುತ್ತದೆ ಎಂದು ವಿವರಿಸುವುದು.<br><br>* ಪ್ರಯೋಗದ ಮೂಲಕ ವಾಹಕಗಳು ಮತ್ತು ಅವಾಹಕಗಳ ಬಗ್ಗೆ ವಿವರವಾಗಿ ವಿವರಿಸುವುದು. | ಶುಷ್ಕ ಕೋಶ, ವಿದ್ಯುತ್ ಬಲ್ಬ್, ವೈರ್‌ಗಳು, ಕಟ್ಟಿಗೆ, ಲೋಹಗಳು ಇತ್ಯಾದಿ | ತಂತ್ರ : ಪ್ರಾತ್ಯಕ್ಷಿಕೆ ಮತ್ತು ವಿವರಣೆ<br>ಸಾಧನ : ಉದಾಹರಣೆಗಳು | * ಸರಳ ವಿದ್ಯುತ್ ಮಂಡಲದ ರಚನೆಯ ಬಗ್ಗೆ ತಿಳಿಯುವರೇ?<br><br>* ವಾಹಕ ಮತ್ತು ಅವಾಹಕಗಳನ್ನು ಗುರುತಿಸುವರೇ? |
| **ವಿಷಯದ ವಿಸ್ತರಣೆ** | * ಮಕ್ಕಳಿಗೆ ಸರಳ ವಿದ್ಯುತ್ ಮಂಡಲವನ್ನು ತಯಾರಿಸಿಕೊಂಡು ಬರಲು ತಿಳಿಸುವುದು. | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ : ಮಾದರಿ ತಯಾರಿಕೆ | * ಮಾದರಿ ತಯಾರಿಕೆಯಲ್ಲಿ ಆಸಕ್ತಿ ಹೊಂದಿರುವರೇ? |
| **ಮೌಲ್ಯಮಾಪನ** | * ಪಠ್ಯಪುಸ್ತಕದ ಪ್ರಶ್ನೆಗಳು ಮತ್ತು ಚಟುವಟಿಕೆಗಳನ್ನು ಮಾಡಿಸಿ, ಕಪ್ಪು ಹಲಗೆಯ ಮೇಲೆ ಮಕ್ಕಳಿಂದ ಮಾಡಿಸುವುದು ಮತ್ತು ಮಾರ್ಗದರ್ಶಿಸುವುದು. | ಪಠ್ಯಪುಸ್ತಕ | ತಂತ್ರ : ಮೌಲ್ಯಮಾಪನ<br>ಸಾಧನ : ಪ್ರಶ್ನೆಗಳು | * ಎಲ್ಲಾ ಪ್ರಶ್ನೆಗಳಿಗೆ ಸರಿಯಾದ ಉತ್ತರಗಳನ್ನು ನೀಡುವರೇ? |

**ವಿಷಯ ಶಿಕ್ಷಕರ ಸಹಿ** **ಮುಖ್ಯಗುರುಗಳ ಸಹಿ**

| ವಿಷಯ : ವಿಜ್ಞಾನ | ಪಾಠ ಯೋಜನೆ | ತರಗತಿ : 6 ನೇ ತರಗತಿ |
|---|---|---|
| ಘಟಕದ ಹೆಸರು : ಕಾಂತಗಳೊಂದಿಗೆ ಆಟ | ದಿನಾಂಕ : ರಿಂದ | ವರೆಗೆ |

| ಸಾಮರ್ಥ್ಯಗಳು : | |
|---|---|
| | 1) ಕಾಂತೀಯ ಮತ್ತು ಅಕಾಂತೀಯ ವಸ್ತುಗಳನ್ನು ಗುರುತಿಸುವುದು. |
| | 2) ಕಾಂತೀಯ ವಸ್ತುಗಳ ಲಕ್ಷಣಗಳನ್ನು ವಿವರಿಸುವುದು. |
| | 3) ಕೃತಕ ಕಾಂತದ ವಿಧಗಳನ್ನು ತಿಳಿಸುವುದು. |
| | 4) ಕೃತಕ ಕಾಂತದ ತಯಾರಿಕೆಯ ವಿಧಾನ ವಿವರಿಸುವುದು. |
| | 5) ಕಾಂತಗಳ ರಕ್ಷಣೆಯ ವಿಧಾನಗಳನ್ನು ತಿಳಿಸುವುದು. |

| ಕಲಿಕೆಯ ಅಂಶಗಳು | ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು | ಬೋಧನಾ–ಕಲಿಕೋಪಕರಣಗಳು | ಮೌಲ್ಯಮಾಪನ ಸಾಧನ–ತಂತ್ರಗಳು | ಶಿಕ್ಷಕರ ಸ್ವ–ಅವಲೋಕನ |
|---|---|---|---|---|
| **ತೊಡಗಿಸಿಕೊಳ್ಳುವಿಕೆ** | * ಮಕ್ಕಳಿಗೆ ಕಾಂತದಿಂದ ಕಾರ್ಯ ನಿರ್ವಹಿಸುವ ಸಾಧನಗಳನ್ನು ಪಟ್ಟಿ ಮಾಡಲು ತಿಳಿಸುವುದು. | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ : ಪಟ್ಟಿ ಮಾಡುವುದು | * ಪೂರ್ವ ಜ್ಞಾನದಿಂದ ಚಟುವಟಿಕೆಯನ್ನು ಮಾಡುವರೇ? |
| **ಪತ್ತೆಹಚ್ಚುವಿಕೆ** | * ಮಕ್ಕಳಿಗೆ ಕಾಂತದಿಂದ ಆಕರ್ಷಣೆಗೆ ಒಳಗಾಗುವ ವಸ್ತುಗಳನ್ನು ಪಟ್ಟಿ ಮಾಡಲು ತಿಳಿಸುವುದು. | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ : ಪಟ್ಟಿ ಮಾಡುವುದು | * ಕಾಂತದೆಡೆಗೆ ಆಕರ್ಷಿತವಾಗುವ ವಸ್ತುಗಳನ್ನು ಗುರುತಿಸುವರೇ? |
| **ವಿವರಣೆ**<br><br>* ಕಾಂತೀಯ ಮತ್ತು ಅಕಾಂತೀಯ ವಸ್ತುಗಳು :<br><br>* ಕಾಂತೀಯ ವಸ್ತುಗಳ ಲಕ್ಷಣಗಳು : | * ಉದಾಹರಣೆಗಳ ಮೂಲಕ ಹಾಗೂ ಸನ್ನಿವೇಶಗಳ ಮೂಲಕ ಕಾಂತೀಯ ಮತ್ತು ಅಕಾಂತೀಯ ವಸ್ತುಗಳ ಬಗ್ಗೆ ವಿವರಿಸುವುದು. ಮತ್ತು ಪ್ರಯೋಗಿಕವಾಗಿ ಕಾಂತೀಯ ವಸ್ತುಗಳನ್ನು ಗುರುತಿಸುವುದು.<br><br>* ಪ್ರಯೋಗಗಳ ಮೂಲಕ ಕಾಂತೀಯ ವಸ್ತುಗಳ ಲಕ್ಷಣಗಳಾದ ಕಾಂತವು ಉತ್ತರ ದಕ್ಷಿಣವಾಗಿ ನಿಲ್ಲುತ್ತದೆ, ಕಾಂತಗಳಿಗೆ ಎರಡು ದ್ರುವಗಳಿರುತ್ತವೆ, ಕಾಂತದ ವಿರುದ್ಧ ಧ್ರುವಗಳು ಆಕರ್ಷಿಸುತ್ತವೆ ಎಂಬುದನ್ನು ವಿವರಿಸುವುದು. | ಮೊಳೆ, ಕಟ್ಟಿಗೆ, ಪ್ಲಾಸ್ಟಿಕ್, ಕೀಲಿ, ಮೇಣದ ಬತ್ತಿ, ಮತ್ತು ಕಾಂತಗಳು | ತಂತ್ರ : ವಿವರಣೆ<br>ಸಾಧನ : ಉದಾಹರಣೆಗಳು, ಪ್ರಯೋಗಗಳು | * ಕಾಂತೀಯ ಮತ್ತು ಅಕಾಂತೀಯ ವಸ್ತುಗಳನ್ನು ಗುರುತಿಸುವರೇ?<br>* ಕಾಂತೀಯ ವಸ್ತುಗಳ ಲಕ್ಷಣಗಳನ್ನು ತಿಳಿಯುವರೇ? |

| ವಿಷಯ : ವಿಜ್ಞಾನ | | ತರಗತಿ : 6 ನೇ ತರಗತಿ | | |
|---|---|---|---|---|
| **ಕಲಿಕೆಯ ಅಂಶಗಳು** | **ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು** | **ಬೋಧನಾ–ಕಲಿಕೋಪಕರಣಗಳು** | **ಮೌಲ್ಯಮಾಪನ ಸಾಧನ–ತಂತ್ರಗಳು** | **ಶಿಕ್ಷಕರ ಸ್ವ–ಅವಲೋಕನ** |
| * ಕೃತಕ ಕಾಂತದ ವಿಧಗಳು :<br><br>* ಕೃತಕ ಕಾಂತದ ತಯಾರಿಕೆ :<br><br>* ಕಾಂತಗಳ ರಕ್ಷಣೆಯ ವಿಧಾನಗಳು : | * ಕೃತಕ ಕಾಂತದ ಮಾದರಿಗಳ ಮೂಲಕ ಕೃತಕ ಕಾಂತದ ವಿಧಗಳನ್ನು ತಿಳಿಸುವುದು.<br><br>* ಪ್ರಯೋಗದ ಮೂಲಕ ಕೃತಕ ಕಾಂತವನ್ನು ತಯಾರಿಸುವ ವಿಧಾನವನ್ನು ಹಂತ ಹಂತವಾಗಿ ವಿವರಿಸುವುದು.<br><br>* ಕಾಂತಗಳ ಕಾಂತತ್ವವು ಹಾಳಾಗಬಾರದೆಂದು ಕೆಲವು ಎಚ್ಚರಿಕೆಗಳನ್ನು ತೆಗೆದುಕೊಳ್ಳಬೇಕು. ಅವುಗಳನ್ನು ಪ್ರಯೋಗಗಳ ಮೂಲಕ ವಿವರಿಸುವುದು. | ಕೃತಕ ಕಾಂತದ ಮಾದರಿಗಳು, ಕಬ್ಬಿಣದ ಪಟ್ಟಿ | ತಂತ್ರ : ಪ್ರಾತ್ಯಕ್ಷಿಕೆ ಮತ್ತು ವಿವರಣೆ<br>ಸಾಧನ : ಉದಾಹರಣೆಗಳು | * ಕಾಂತಗಳ ವಿಧಗಳನ್ನು ಗುರುತಿಸುವರೇ?<br><br>* ಕೃತಕ ಕಾಂತವನ್ನು ತಯಾರಿಸುವರೇ? |
| **ವಿಷಯದ ವಿಸ್ತರಣೆ** | * ಮಕ್ಕಳಿಗೆ ದಿಕ್ಸೂಚಿಯನ್ನು ಬಳಸಿ ನಿಮ್ಮ ಮನೆಯ ಪ್ರವೇಶ ದ್ವಾರವು ಯಾವ ದಿಕ್ಕಿಗೆ ಇದೆ ಎಂಬುದನ್ನು ಪತ್ತೆ ಹಚ್ಚಲು ತಿಳಿಸುವುದು. | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ : ಪತ್ತೆ ಹಚ್ಚುವಿಕೆ | * ದಿಕ್ಸೂಚಿಯ ಅನ್ವಯವನ್ನು ತಿಳಿಯುವರೇ? |
| **ಮೌಲ್ಯಮಾಪನ** | * ಪಠ್ಯಪುಸ್ತಕದ ಪ್ರಶ್ನೆಗಳು ಮತ್ತು ಚಟುವಟಿಕೆಗಳನ್ನು ಮಾಡಿಸಿ, ಕಪ್ಪು ಹಲಗೆಯ ಮೇಲೆ ಮಕ್ಕಳಿಂದ ಮಾಡಿಸುವುದು ಮತ್ತು ಮಾರ್ಗದರ್ಶಿಸುವುದು. | ಪಠ್ಯಪುಸ್ತಕ | ತಂತ್ರ : ಮೌಲ್ಯಮಾಪನ<br>ಸಾಧನ : ಪ್ರಶ್ನೆಗಳು | * ಎಲ್ಲಾ ಪ್ರಶ್ನೆಗಳಿಗೆ ಸರಿಯಾದ ಉತ್ತರಗಳನ್ನು ನೀಡುವರೇ? |

**ವಿಷಯ ಶಿಕ್ಷಕರ ಸಹಿ** **ಮುಖ್ಯಗುರುಗಳ ಸಹಿ**

| ವಿಷಯ : ವಿಜ್ಞಾನ | ಪಾಠ ಯೋಜನೆ | ತರಗತಿ : 6 ನೇ ತರಗತಿ |
|---|---|---|
| ಘಟಕದ ಹೆಸರು : ನೀರು | ದಿನಾಂಕ : ರಿಂದ ವರೆಗೆ | |
| ಸಾಮರ್ಥ್ಯಗಳು : | 1) ನೀರು ಜೀವಕ್ಕೆ ಅಗತ್ಯ ಮತ್ತು ನೀರಿನ ಉಪಯೋಗಗಳನ್ನು ತಿಳಿಯುವರು. 2) ನೀರಾವಿಯು ಆವೀಕರಣ ಮತ್ತು ಭಾಷ್ಪೀಕರಣದ ಮುಖಾಂತರ ಗಾಳಿಗೆ ಸೇರುತ್ತದೆ ಎಂದು ತಿಳಿಯುವರು. 3) ಗಾಳಿಯಲ್ಲಿನ ನೀರಾವಿಯು ಸಾಂದ್ರೀಕೃತವಾಗಿ ಮೋಡವಾಗಿ ಮಳೆಯ ರೂಪದಲ್ಲಿ ಇಳಿಯುತ್ತದೆ ಎಂದು ಅರ್ಥೈಸುವುದು. 4) ಮಳೆ, ಆಲಿಕಲ್ಲು ಮತ್ತು ಹಿಮ ಇವು ನದಿಗಳಲ್ಲಿ, ಬಾವಿಗಳಲ್ಲಿ, ಮಣ್ಣಿನಲ್ಲಿ ನೀರನ್ನು ಭರ್ತಿ ಮಾಡುತ್ತವೆ ಎಂದು ತಿಳಿಯುವರು. 5) ಸಾಗರ ಮತ್ತು ಭೂಮಿಯ ನಡುವಿನ ನೀರಿನ ಪರಿಚಲನೆಯನ್ನು ಜಲಚಕ್ರ ಎನ್ನುವರು ಎಂದು ತಿಳಿಯುವರು. 6) ನೀರಿನ ಸಮರ್ಪಕ ಬಳಕೆಯ ಬಗ್ಗೆ ತಿಳಿಯುವರು. | |

| ಕಲಿಕೆಯ ಅಂಶಗಳು | ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು | ಬೋಧನಾ–ಕಲಿಕೋಪಕರಣಗಳು | ಮೌಲ್ಯಮಾಪನ ಸಾಧನ–ತಂತ್ರಗಳು | ಶಿಕ್ಷಕರ ಸ್ವ–ಅವಲೋಕನ |
|---|---|---|---|---|
| **ತೊಡಗಿಸಿಕೊಳ್ಳುವಿಕೆ** | * ಮಕ್ಕಳಿಗೆ ನೀರಿನ ಉಪಯೋಗಗಳ ಬಗ್ಗೆ ಚರ್ಚಿಸಿ, ಉಪಯೋಗಳನ್ನು ಪಟ್ಟಿ ಮಾಡಲು ಹೇಳುವುದು. | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ : ಪಟ್ಟಿ ಮಾಡುವುದು | * ಪೂರ್ವ ಜ್ಞಾನದಿಂದ ಚಟುವಟಿಕೆಯನ್ನು ಮಾಡುವರೇ? |
| **ಪತ್ತೆಹಚ್ಚುವಿಕೆ** | * ಮಕ್ಕಳಿಗೆ ತಮ್ಮ ಮನೆಯಲ್ಲಿ ಯಾವ ಯಾವ ಕೆಲಸಗಳಿಗೆ ಎಷ್ಟೆಷ್ಟು ನೀರನ್ನು ಬಳಸುತ್ತೇವೆ ಎಂಬ ಮಾಹಿತಿಯನ್ನು ಸಂಗ್ರಹಿಸಲು ತಿಳಿಸುವುದು. | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ : ಮಾಹಿತಿ ಸಂಗ್ರಹಣೆ | * ಸಮರ್ಪಕ ಮಾಹಿತಿ ಸಂಗ್ರಹಿಸುವರೇ? |
| **ವಿವರಣೆ**<br>* ನೀರಿನ ಉಪಯೋಗಗಳು ಮತ್ತು ನೀರಿನ ಮೂಲಗಳು :<br>* ಜಲಚಕ್ರ : | * ನೀರಿನ ಉಪಯೋಗಗಳ ಕುರಿತು ಮಕ್ಕಳೊಂದಿಗೆ ಚರ್ಚಿಸುತ್ತಾ ನೀರಿನ ಮೂಲಗಳಾದ ಚಿಲುಮೆ, ಕೊಲ, ನದಿ, ಕೆರೆ, ಬಾವಿ, ಸರೋವರ, ಸಮುದ್ರಗಲ ಹಾಗೂ ಕೊಳವೆಬಾವಿಗಳ ಕುರಿತು ತಿಳಿಸುವುದು.<br><br>* ಗಾಳಿಯಲ್ಲಿನ ನೀರಾವಿಯು ಸಾಂದ್ರೀಕೃತವಾಗಿ ನೀರಿನ ಸಣ್ಣ ಹನಿಗಳಾಗುತ್ತವೆ ಅದೇ ಮೋಡವಾಗಿ ನೀರಿನ ಸಣ್ಣ ಹನಿಗಳು ಜೊತೆಗೂಡಿ ಮಳೆ, ಹಿಮ ಅಥವಾ ಆಲಿಕಲ್ಲುಗಳಾಗಿ ಭೂಮಿಗೆ ಬೀಳುತ್ತವೆ ಎಂದು ಜಲಚಕ್ರವನ್ನು ವಿವರಿಸುವುದು. | ಚಿತ್ರ ಪಟ, ಮತ್ತು ವಿಡಿಯೋ | ತಂತ್ರ : ವಿವರಣೆ<br>ಸಾಧನ :<br>ಉದಾಹರಣೆಗಳು, ಪ್ರಯೋಗಗಳು | * ನೀರಿನ ಮೂಲಗಳನ್ನು ಗುರುತಿಸುವರೇ?<br><br>* ಜಲಚಕ್ರದ ಬಗ್ಗೆ ತಿಳಿಯುವರೇ? |

| ವಿಷಯ : ವಿಜ್ಞಾನ | | ತರಗತಿ : 6 ನೇ ತರಗತಿ | | |
|---|---|---|---|---|
| **ಕಲಿಕೆಯ ಅಂಶಗಳು** | **ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು** | **ಬೋಧನಾ–ಕಲಿಕೋಪಕರಣಗಳು** | **ಮೌಲ್ಯಮಾಪನ ಸಾಧನ–ತಂತ್ರಗಳು** | **ಶಿಕ್ಷಕರ ಸ್ವ–ಅವಲೋಕನ** |
| * ಕೃತಕ ಕಾಂತದ ವಿಧಗಳು :<br><br>* ನೀರಿನ ಸಂರಕ್ಷಣೆ ಮತ್ತು ಮಳೆ ನೀರು ಕೊಯ್ಲು : | * ಮೋಡಗಳು ನೀರಾವಿಯು ಸಾಂದ್ರೀಕೃತಗೊಳ್ಳುವುದರಿಂದ ಉಂಟಾಗುತ್ತವೆ ಎಂದು ತಿಳಿಸುವುದು. ಹಾಗೂ ಅತಿವೃಷ್ಟಿ ಮತ್ತು ಅನಾವೃಷ್ಟಿಯ ವ್ಯಾಖ್ಯೆಗಳನ್ನು ನೀಡಿ ಅವುಗಳ ಪರಿಣಾಮಗಳನ್ನು ಚರ್ಚಿಸುವುದು.<br><br>* ಭೂಮಿಯ ಮೇಲೆ ಕುಡಿಯುವ ನೀರಿನ ಪ್ರಮಾಣ ಬಹಳಷ್ಟು ಕಡಿಮೆ ಇರುವುದರಿಂದ ನಾವು ನೀರನ್ನು ಬಹಳ ಎಚ್ಚರಿಕೆಯಿಂದ ಮಿತವಾಗಿ ಬಳಸಬೇಕು ಮತ್ತು ನೀರನ್ನು ಭೂಮಿಗೆ ಮರು ಪೂರಣ ಮಾಡುವುದರಿಂದ ಅಂತರ್ಜಲದ ಮಟ್ಟವನ್ನು ಹೆಚ್ಚಿಸಬಹುದೆಂದು ಉದಾಹರಣೆಗಳ ಮೂಲಕ ವಿವರಿಸುವದು. | ಚಿತ್ರ ಪಟ, ಮತ್ತು ವಿಡಿಯೋ | ತಂತ್ರ : ವಿವರಣೆ<br>ಸಾಧನ : ಉದಾಹರಣೆಗಳು | * ಅತಿವೃಷ್ಟಿ ಮತ್ತು ಅನಾವೃಷ್ಟಿಯ ಬಗ್ಗೆ ತಿಳಿಯುವರೇ?<br><br>* ನೀರಿನ ಸಂರಕ್ಷಣೆಯ ಮಹತ್ವನ್ನು ತಿಳಿಯುವರೇ? |
| **ವಿಷಯದ ವಿಸ್ತರಣೆ** | * ಮಕ್ಕಳಿಗೆ ನೀರನ್ನು ಉಳಿಸಿ ಎಂಬ ವಿಷಯದ ಮೇಲೆ ಐದು ಘೋಷಣಾ ವಾಕ್ಯಗಳನ್ನು ರಚಿಸಲು ತಿಳಿಸುವುದು. | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ : ರಚನೆ | * ಘೋಷಣಾ ವಾಕ್ಯಗಳನ್ನು ರಚಿಸುವುರೇ? |
| **ಮೌಲ್ಯಮಾಪನ** | * ಪಠ್ಯಪುಸ್ತಕದ ಪ್ರಶ್ನೆಗಳು ಮತ್ತು ಚಟುವಟಿಕೆಗಳನ್ನು ಮಾಡಿಸಿ, ಕಪ್ಪು ಹಲಗೆಯ ಮೇಲೆ ಮಕ್ಕಳಿಂದ ಮಾಡಿಸುವುದು ಮತ್ತು ಮಾರ್ಗದರ್ಶಿಸುವುದು. | ಪಠ್ಯಪುಸ್ತಕ | ತಂತ್ರ : ಮೌಲ್ಯಮಾಪನ<br>ಸಾಧನ : ಪ್ರಶ್ನೆಗಳು | * ಎಲ್ಲಾ ಪ್ರಶ್ನೆಗಳಿಗೆ ಸರಿಯಾದ ಉತ್ತರಗಳನ್ನು ನೀಡುವರೇ? |

**ವಿಷಯ ಶಿಕ್ಷಕರ ಸಹಿ** **ಮುಖ್ಯಗುರುಗಳ ಸಹಿ**

| ವಿಷಯ : ವಿಜ್ಞಾನ | ಪಾಠ ಯೋಜನೆ | ತರಗತಿ : 6 ನೇ ತರಗತಿ |
|---|---|---|
| ಘಟಕದ ಹೆಸರು : ನಮ್ಮ ಸುತ್ತಲ ಗಾಳಿ | ದಿನಾಂಕ : ರಿಂದ | ವರೆಗೆ |

| ಸಾಮರ್ಥ್ಯಗಳು : | |
|---|---|
| | 1) ಗಾಳಿಯು ಎಲ್ಲೆಲ್ಲೂ ಇದೆ ಆದರೆ ನಾವು ಅದನ್ನು ನೋಡಲಾಗುವುದಿಲ್ಲ ಆದರೆ ಅನುಭವಿಸಬಹುದು ಎಂಬುದನ್ನು ತಿಳಿಯುವರು. |
| | 2) ಗಾಳಿಯ ಲಕ್ಷಣಗಳನ್ನು ತಿಳಿಸುವುದು. |
| | 3) ಗಾಳಿಯ ಘಟಕಗಳನ್ನು ವಿವರಿಸುವುದು. |
| | 4) ನೀರು ಮತ್ತೂ ಮಣ್ಣಿನಲ್ಲಿರುವ ಪ್ರಾಣಿಗಳು ಮತ್ತು ಸಸ್ಯಗಳಿಗೆ ಆಕ್ಸಿಜನ್ ಲಭ್ಯತೆಯ ಬಗ್ಗೆ ತಿಳಿಸುವುದು. |
| | 5) ವಾತಾವರಣಕ್ಕೆ ಆಕ್ಸಿಜನ್ ಮರುಪೂರೈಕೆಯ ಬಗ್ಗೆ ವಿವರಿಸುವುದು. |

| ಕಲಿಕೆಯ ಅಂಶಗಳು | ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು | ಬೋಧನಾ–ಕಲಿಕೋಪಕರಣಗಳು | ಮೌಲ್ಯಮಾಪನ ಸಾಧನ–ತಂತ್ರಗಳು | ಶಿಕ್ಷಕರ ಸ್ವ–ಅವಲೋಕನ |
|---|---|---|---|---|
| **ತೊಡಗಿಸಿಕೊಳ್ಳುವಿಕೆ** | * ಮಕ್ಕಳಿಗೆ ಗಾಳಿಯ ಉಪಯೋಗಗಳ ಬಗ್ಗೆ ಚರ್ಚಿಸಿ, ಉಪಯೋಗಳನ್ನು ಪಟ್ಟಿ ಮಾಡಲು ಹೇಳುವುದು. | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ : ಪಟ್ಟಿ ಮಾಡುವುದು | * ಪೂರ್ವ ಜ್ಞಾನದಿಂದ ಚಟುವಟಿಕೆಯನ್ನು ಮಾಡುವರೇ? |
| **ಪತ್ತೆಹಚ್ಚುವಿಕೆ** | * ಮಕ್ಕಳಿಗೆ ವಾತಾವರಣದಲ್ಲಿನ ಗಾಳಿಯು ಏಕೆ ಕಲುಷಿತವಾಗುತ್ತಿದೆ ಎಂಬುದಕ್ಕೆ ಕಾರಣಗಳನ್ನು ಪತ್ತೆ ಹಚ್ಚಲು ತಿಳಿಸುವುದು. | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ : ಮಾಹಿತಿ ಸಂಗ್ರಹಣೆ | * ಸಮರ್ಪಕ ಮಾಹಿತಿ ಸಂಗ್ರಹಿಸುವರೇ? |
| **ವಿವರಣೆ**<br>* ಗಾಳಿ ಮತ್ತು ಗಾಳಿಯ ಉಪಯೋಗಗಳು : | * ಗಾಳಿಯು ನಮ್ಮ ಸುತ್ತಲೂ ಇದೆ ಅದು ಅಗೋಚರವಾಗಿದ್ದು ನಾವು ಅನುಭವಿಸುವ ಮೂಲಕ ತಿಳಿಯಬಹುದು ಎಂದು ತಿಳಿಸುತ್ತಾ ಗಾಳಿಯು ಪಾರದರ್ಶಕವಾಗಿದೆ ಎಂಬುದನ್ನು ವಿವರಿಸುವುದು. ನೀರು ಮತ್ತು ಮಣ್ಣಿನಲ್ಲಿ ಗಾಳಿ ಇದೆ ಎಂಬುದನ್ನು ಉದಾಹರಣೆಗಳ ಮೂಲಕ ವಿವರಿಸುವುದು. ಭೂಮಿಯಿಂದ ಮೇಲಕ್ಕೆ ಹೋದಂತೆ ಗಾಳಿಯು ವಿರಳವಾಗುತ್ತದೆ ಎಂದು ತಿಳಿಸುವುದು. | ಚಿತ್ರ ಪಟ, ಮೇಣದ ಬತ್ತಿ, ಗಾಜಿನ ಲೋಟ, ಬಲೂನ್‌ಗಳು | ತಂತ್ರ : ವಿವರಣೆ<br>ಸಾಧನ : ಉದಾಹರಣೆಗಳು, ಪ್ರಯೋಗಗಳು | * ಗಾಳಿಯು ಎಲ್ಲಾ ಕಡೆ ಇದೆ ಎಮದು ತಿಳಿಯುವರೇ? |

| ವಿಷಯ : ವಿಜ್ಞಾನ | | ತರಗತಿ : 6 ನೇ ತರಗತಿ | | |
|---|---|---|---|---|
| **ಕಲಿಕೆಯ ಅಂಶಗಳು** | **ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು** | **ಬೋಧನಾ– ಕಲಿಕೋಪಕರಣಗಳು** | **ಮೌಲ್ಯಮಾಪನ ಸಾಧನ–ತಂತ್ರಗಳು** | **ಶಿಕ್ಷಕರ ಸ್ವ– ಅವಲೋಕನ** |
| * ಗಾಳಿಯ ಘಟಕಗಳು :<br><br>* ಗಾಳಿಯ ಲಕ್ಷಣಗಳು :<br><br>* ವಾತಾವರಣಕ್ಕೆ ಆಕ್ಸಿಜನ್ ನ ಮರುಪೂರಣ : | * ಗಾಳಿಯು ಒಂದು ಮಿಶ್ರಣವಾಗಿದ್ದು ಗಾಳಿಯು ನೀರಾವಿ, ಆಕ್ಸಿಜನ್, ನೈಟ್ರೋಜನ್, ಕಾರ್ಬನ್ ಡೈ ಆಕ್ಸೈಡ್ ಮತ್ತು ಧೂಳು ಹಾಗೂ ಹೊಗೆಯಿಂದ ರಚನೆಯಗಿದೆ ಎಂದು ಚಟುವಟಿಕೆಗಳ ಮೂಲಕ ವಿವರಿಸುವುದು.<br><br>* ಪ್ರಯೋಗಗಳ ಮೂಲಕ ಗಾಳಿಯ ಲಕ್ಷಣಗಳಾದ ಗಾಳಿಯು ಸ್ಥಳವನ್ನು ಆಕ್ರಮಿಸುತ್ತದೆ ಮತ್ತು ಗಾಳಿಯು ದ್ರವ್ಯರಾಶಿಯನ್ನು ಹೊಂದಿದೆ ಎಂಬುದನ್ನು ವಿವರಿಸುವುದು.<br><br>* ಗಾಳಿಯಲ್ಲಿನ ಆಕ್ಸಿಜನ್ ಮತ್ತು ಕಾರ್ಬನ್ ಡೈ ಆಕ್ಸೈಡ್ ವಿನಿಮಯ ಮಾಡಿಕೊಳ್ಳುವುದರಿಂದ ಸಸ್ಯಗಳು ಮತ್ತು ಪ್ರಾಣಿಗಳು ಪರಸ್ಪರ ಅವಲಂಬಿತವಾಗಿವೆ ಹಾಗೂ ಪರಿಸರಕ್ಕೆ ಆಕ್ಸಿಜನ್ ಅನ್ನು ಮರು ಪೂರಣವಾಡುವಲ್ಲಿ ಸಹಕಾರಿಯಾಗಿವೆ ಎಂಬುದನ್ನು ವಿವರಿಸುವುದು. | ಚಿತ್ರ ಪಟ, ಮೇಣದ ಬತ್ತಿ, ಗಾಜಿನ ಲೋಟ, ಬಲೂನ್‌ಗಳು | ತಂತ್ರ : ವಿವರಣೆ<br>ಸಾಧನ : ಉದಾಹರಣೆಗಳು, ಪ್ರಯೋಗಗಳು | * ಗಾಳಿಯ ಘಟಕಾಂಶಗಳನ್ನು ಅರಿಯುವರೇ?<br><br>* ಗಾಳಿಯ ಲಕ್ಷಣಗಳನ್ನು ಅರಿಯುವರೇ??<br><br>* ವಾತಾವರಣಕ್ಕೆ ಆಕ್ಸಿಜನ್‌ನ ಮರುಪೂರಣದ ಬಗ್ಗೆ ತಿಳಿಯುವರೇ? |
| **ವಿಷಯದ ವಿಸ್ತರಣೆ** | * ಮಕ್ಕಳಿಗೆ ವಾಯುಮಲಿನ್ಯ ಮತ್ತು ಸಂರಕ್ಷಣೆಯ ಕುರಿತು ಭಾಷಣ ಸ್ಪರ್ಧೆಯನ್ನು ಏರ್ಪಡಿಸುವುದು. | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ : ಭಾಷಣ ಸ್ಪರ್ಧೆ | * ವಿಷಯ ಸಂಗ್ರಹ ಉತ್ತಮವಾಗಿ ಮಾಡಿದ್ದಾರೆಯೇ? |
| **ಮೌಲ್ಯಮಾಪನ** | * ಪಠ್ಯಪುಸ್ತಕದ ಪ್ರಶ್ನೆಗಳು ಮತ್ತು ಚಟುವಟಿಕೆಗಳನ್ನು ಮಾಡಿಸಿ, ಕಪ್ಪು ಹಲಗೆಯ ಮೇಲೆ ಮಕ್ಕಳಿಂದ ಮಾಡಿಸುವುದು ಮತ್ತು ಮಾರ್ಗದರ್ಶಿಸುವುದು. | ಪಠ್ಯಪುಸ್ತಕ | ತಂತ್ರ : ಮೌಲ್ಯಮಾಪನ<br>ಸಾಧನ : ಪ್ರಶ್ನೆಗಳು | * ಎಲ್ಲಾ ಪ್ರಶ್ನೆಗಳಿಗೆ ಸರಿಯಾದ ಉತ್ತರಗಳನ್ನು ನೀಡುವರೇ? |

**ವಿಷಯ ಶಿಕ್ಷಕರ ಸಹಿ** **ಮುಖ್ಯಗುರುಗಳ ಸಹಿ**

| ವಿಷಯ : ವಿಜ್ಞಾನ | ಪಾಠ ಯೋಜನೆ | ತರಗತಿ : 6 ನೇ ತರಗತಿ |
|---|---|---|
| ಘಟಕದ ಹೆಸರು : ಒಳಬರುವ ಕಸ, ಹೊರ ಹೋಗುವ ಕಸ | ದಿನಾಂಕ : ರಿಂದ | ವರೆಗೆ |

| | |
|---|---|
| ಸಾಮರ್ಥ್ಯಗಳು : | 1) ಕಸದ ಅರ್ಥವನ್ನು ತಿಳಿಸಿ, ಕಸದ ನಿರ್ವಹಣೆಯ ವಿಧಾನಗಳನ್ನು ವಿವರಿಸುವುದು. |
| | 2) ಎರೆಗೊಬ್ಬರವನ್ನು ತಯಾರಿಸುವ ಹಂತಗಳನ್ನು ವಿವರಿಸುವುದು. |
| | 3) ಕಾಗದದ ಮರುಚಕ್ರೀಕರಣದ ವಿಧಾನ ಮತ್ತು ಉಪಯೋಗಗಳನ್ನು ವಿವರಿಸುವುದು. |
| | 4) ಪ್ಲಾಸ್ಟಿಕ್‌ಗಳು ವರವೋ ಅಥವಾ ಶಾಪವೋ ಎಂಬುದನ್ನು ಚರ್ಚಿಸುವುದು. |
| | 50 ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆ ಮಾಡಲು ನಿರ್ವಹಿಸಬೇಕಾದ ಕ್ರಮಗಳನ್ನು ವಿವರಿಸುವುದು. |

| ಕಲಿಕೆಯ ಅಂಶಗಳು | ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು | ಬೋಧನಾ–ಕಲಿಕೋಪಕರಣಗಳು | ಮೌಲ್ಯಮಾಪನ ಸಾಧನ–ತಂತ್ರಗಳು | ಶಿಕ್ಷಕರ ಸ್ವ–ಅವಲೋಕನ |
|---|---|---|---|---|
| ತೊಡಗಿಸಿಕೊಳ್ಳುವಿಕೆ | * ಮಕ್ಕಳ ಗುಂಪುಗಳಿಗೆ ಸ್ವಚ್ಛ ಭಾರತ ಅಭಿಯಾನದ ಉದ್ದೇಶಗಳನ್ನು ಚಚಿಶಿ ಪಟ್ಟಿ ಮಾಡಲು ತಿಳಿಸುವುದು. | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ : ಪಟ್ಟಿ ಮಾಡುವುದು | * ಪೂರ್ವ ಜ್ಞಾನದಿಂದ ಚಟುವಟಿಕೆಯನ್ನು ಮಾಡುವರೇ? |
| ಪತ್ತೆಹಚ್ಚುವಿಕೆ | * ಮಕ್ಕಳಿಗೆ ತಮ್ಮ ತರಗತಿಯಲ್ಲಿ ಹಾಗೂ ಮನೆಯಲ್ಲಿ ಕಸವನ್ನು ಹೇಗೆ ನಿರ್ವಹಣೆ ಮಾಡುವಿರಿ ಎಂಬುದರ ಕುರಿತು ತಿಳಿಸಲು ಹೇಳುವುದು. | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ : ಮಾಹಿತಿ ಸಂಗ್ರಹಣೆ | * ಸಮರ್ಪಕ ಮಾಹಿತಿ ಸಂಗ್ರಹಿಸುವರೇ? |
| ವಿವರಣೆ<br>* ಕಸದ ನಿರ್ವಹಣೆ :<br>* ಎರೆ ಗೊಬ್ಬರ ತಯಾರಿಕೆ : | * ಸಸ್ಯ ಹಾಗೂ ಪ್ರಾಣಿ ತ್ಯಾಜ್ಯವನ್ನು ಹಾಗೂ ಅಡುಗೆ ಮನೆಯ ತ್ಯಾಜ್ಯವನ್ನು ಒಳಗೊಂಡಂತೆ ಗೊಬ್ಬರವಾಗಿ ಪರಿವರ್ತಿಸುವ ಮಿಶ್ರಗೊಬ್ಬರ ಮಾಡುವುದು ಎಂಬುದನ್ನು ಉದಾಹರಣೆಯೊಂದಿಗೆ ವಿವರಿಸುವುದು.<br><br>* ಕೆಂಪು ಹುಳುಗಳನ್ನು ಬಳಸಿ ಮಿಸ್ರ ಗೊಬ್ಬರ ಮಾಡುವ ವಿಧಾನಕ್ಕೆ ಎರೆ ಗೊಬ್ಬರ ಮಾಡುವಿಕೆ ಎನ್ನುವರು ಎಂದು ತಿಳಸುವುದು ಹಾಗೂ ಕಸವನ್ನು ಎಲ್ಲೆಮದರಲ್ಲಿ ಚೆಲ್ಲುವುದನ್ನು ಮಾಡದೆ ಸೂಕ್ತ ಸ್ಥಳದಲ್ಲಿ ವಲೇವಾರಿ ಮಾಡಬೇಕು ಎಂದು ವಿವರಿಸುವುದು. | ಚಿತ್ರ ಪಟ, ಮತ್ತು ವಿಡಿಯೋ | ತಂತ್ರ : ವಿವರಣೆ<br>ಸಾಧನ : ಉದಾಹರಣೆಗಳು | * ಕಸದ ನಿರ್ವಹಣೆಯ ಹಂತಗಳನ್ನು ತಿಳಿಯುವರೇ?<br>* ಎರೆಗೊಬ್ಬರ ತಯಾರಿಕೆಯ ವಿಧನವನ್ನು ತಿಳಿಯುವರೇ? |

| ವಿಷಯ : ವಿಜ್ಞಾನ | | ತರಗತಿ : 6 ನೇ ತರಗತಿ | | |
|---|---|---|---|---|
| **ಕಲಿಕೆಯ ಅಂಶಗಳು** | **ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು** | **ಬೋಧನಾ-ಕಲಿಕೋಪಕರಣಗಳು** | **ಮೌಲ್ಯಮಾಪನ ಸಾಧನ-ತಂತ್ರಗಳು** | **ಶಿಕ್ಷಕರ ಸ್ವ-ಅವಲೋಕನ** |
| * ಕಾಗದದ ಮರು ಚಕ್ರೀಕರಣ :<br><br>* ಪ್ಲಾಸ್ಟಿಕ್ ವರವೋ ಅಥವಾ ಶಾಪವೋ : | * ಕಾಗದವನ್ನು ಮರು ಚಕ್ರೀಕರಣ ಮಾಡಿ ಉಪಯುಕ್ತ ಉತ್ಪನ್ನಗಳನ್ನು ಪಡೆಯಬಹುದು ಎಂಬುದನ್ನು ತಿಳಿಸುವುದು.<br><br>* ಪ್ಲಾಸ್ಟಿಕ್ ಅತಿ ಬಳಕೆ ಮಾಡುವುದರಿಂದ ಪರಿಸರ ಹಾನಿ ಉಂಟಾಗುತ್ತದೆ ಎಂದು ತಿಳಿಸುತ್ತಾ, ಪ್ಲಾಸ್ಟಿಕ್‌ಗಳ ಬಳಕೆಯನ್ನು ಕಡಿಮೆ ಮಾಡಲು ಮತ್ತು ನಿರ್ವಹಿಸಬೇಕಾದ ಕ್ರಮಗಳನ್ನು ಚರ್ಚೆಯ ಮೂಲಕ ವಿವರಾಗಿ ತಿಳಿಸುವುದು. | ಚಿತ್ರ ಪಟ, ಮತ್ತು ವಿಡಿಯೋ | ತಂತ್ರ : ವಿವರಣೆ<br>ಸಾಧನ : ಉದಾಹರಣೆಗಳು | * ಕಾಗದದ ಮರು ಚಕ್ರೀಕರಣದ ಮಹತ್ವ ತಿಳಿಯುವರೇ?<br><br>* ಪ್ಲಾಸ್ಟಿಕ್ ವರವೋ ಅಥವಾ ಶಾಪವೋ ಎಂಬುದನ್ನು ಅರಿಯುವರೇ? |
| **ವಿಷಯದ ವಿಸ್ತರಣೆ** | * ಮಕ್ಕಳಿಗೆ ಕಸದಿಂದ ರಸ ಎಂಬ ವಿಷಯದ ಬಗ್ಗೆ ಪ್ರಬಂಧ ಬರೆಯಲು ತಿಳಿಸುವುದು. | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ : ಪ್ರಬಂಧ ರಚನೆ | * ಪ್ರಬಂಧ ರಚನೆಯ ಬಗ್ಗೆ ಆಸಕ್ತಿ ಹೊಂದಿರುವರೇ? |
| **ಮೌಲ್ಯಮಾಪನ** | * ಪಠ್ಯಪುಸ್ತಕದ ಪ್ರಶ್ನೆಗಳು ಮತ್ತು ಚಟುವಟಿಕೆಗಳನ್ನು ಮಾಡಿಸಿ, ಕಪ್ಪು ಹಲಗೆಯ ಮೇಲೆ ಮಕ್ಕಳಿಂದ ಮಾಡಿಸುವುದು ಮತ್ತು ಮಾರ್ಗದರ್ಶಿಸುವುದು. | ಪಠ್ಯಪುಸ್ತಕ | ತಂತ್ರ : ಮೌಲ್ಯಮಾಪನ<br>ಸಾಧನ : ಪ್ರಶ್ನೆಗಳು | * ಎಲ್ಲಾ ಪ್ರಶ್ನೆಗಳಿಗೆ ಸರಿಯಾದ ಉತ್ತರಗಳನ್ನು ನೀಡುವರೇ? |

**ವಿಷಯ ಶಿಕ್ಷಕರ ಸಹಿ** **ಮುಖ್ಯಗುರುಗಳ ಸಹಿ**